MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER · VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 04 | ಸಂಚಿಕೆ: 283 | ಬುಧವಾರ : 27-08-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 283 | WEDNESDAY : 27-08-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

# ಡಿಕೆಶಿ ಕ್ಷಮೆ ಯಾಚನೆ



**ಬೆಂಗಳೂರು,ಆ.26–**ವಿಧಾನಸಭೆಯಲ್ಲಿ ಆರ್‌ಎಸ್‌ಎಸ್‌ನ ನಮಸ್ತೆ ಸದಾ ವತ್ಸಲೇ ಪ್ರಾರ್ಥನಾ ಗೀತೆ ಹಾಡಿದ್ದ ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಕ್ಷಮೆ ಯಾಚಿಸಿದ್ದಾರೆ.

ಆರ್‌ಎಸ್‌ಎಸ್‌ನ ಗೀತೆಯನ್ನು ಬಿಜೆಪಿ ಕಾಲೆಳೆಯಲು ಹಾಡಿದ್ದೇ ಹೊರತು ಆರ್‌ಎಸ್‌ಎಸ್‌ನ ಹೊಗಳಬೇಕು ಎಂಬ ಉದ್ದೇಶ ಇದರಲ್ಲಿ ಇರಲಿಲ್ಲ ಎಂದು ಸ್ಪಷ್ಟನೆ ನೀಡಿರುವ ಅವರು, ನಾನು ಆರ್‌ಎಸ್‌ಎಸ್ ಗೀತೆ ಹಾಡಿದ್ದಕ್ಕೆ ಯಾರಿಗಾದರು ನೋವಾಗಿದ್ದರೆ, ಬೇಸರವಾಗಿದ್ದರೆ ಕ್ಷಮೆ ಕೇಳಲು ಸಿದ್ಧ, ನಾನು ಹುಟ್ಟು ಕಾಂಗ್ರೆಸ್ಸಿಗನಾಗಿಯೇ ಸಾಯುತ್ತೇನೆ ಎಂದು ಡಿ.ಕೆ ಶಿವಕುಮಾರ್ ಭಾವುಕರಾದರು.

ಕಳೆದ ವಿಧಾನಸಭಾ ಅಧಿವೇಶನದಲ್ಲಿ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಆರ್‌ಎಸ್‌ಎಸ್‌ನ ನಮಸ್ತೆ ಸದಾ ವತ್ಸಲೇ ಹಾಡು ಹೇಳಿದ್ದು, ಕಾಂಗ್ರೆಸ್‌ನಲ್ಲಿ ಕಿಚ್ಚಿಗೆ ಕಾರಣವಾಗಿ ಹಲವು ನಾಯಕರಾಗಿ ಟೀಕೆ–ಟಿಪ್ಪಣಿಗಳು ವ್ಯಕ್ತವಾಗಿದ್ದವು. ಹಿರಿಯ ನಾಯಕ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ ಶಿವಕುಮಾರ್ ಆರ್‌ಎಸ್‌ಎಸ್ ಗೀತೆ ಹಾಡಿದ್ದರೆ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು. ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಉಪಮುಖ್ಯಮಂತ್ರಿ ಡಿ,ಕೆ ಶಿವಕುಮಾರ್ ಇಂದು ವಿಧಾನಸಭೆಯಲ್ಲಿ ಸುದ್ದಿಗೋಷ್ಠಿ ನಡೆಸಿ ಕ್ಷಮೆ ಕೋರಲು ಸಿದ್ಧ ಎಂದು ಹೇಳಿ ಎಲ್ಲದ್ದಕ್ಕೂ ತೆರೆ ಎಳೆಯುವ ಪ್ರಯತ್ನ ಮಾಡಿದರು.

ನಾನು ಯಾರಿಗೋ ಹೆದರಿ ಕ್ಷಮೆ ಕೇಳುತ್ತಿಲ್ಲ. ವಿಧಾನಸಭೆಯಲ್ಲಿ ಬಿಜೆಪಿಯವರ ಕಾಲೆಳೆಯಲು ಪಾಸಿಂಗ್ ರೆಫ್ರೆರೆನ್ಸ್ ಆಗಿ ಆರ್‌ಎಸ್‌ಎಸ್ ಗೀತೆ ಹಾಡಿದ್ದೇನೆ. ನನ್ನ ಪಕ್ಷದ ನಿಷ್ಠೆಯನ್ನು ಪ್ರಶ್ನೆ ಮಾಡುವುದು ಬೇಡ, ಪ್ರಶ್ನೆ ಮಾಡುವವರು ಮೂರ್ಖರು ಎಂದು ಹೇಳಿದರು.

ನಾನು ಏನೂ ತಪ್ಪು ಮಾಡಿಲ್ಲ. ಆರ್‌ಎಸ್‌ಎಸ್ ಗೀತೆ ಹಾಡಿದ್ದಕ್ಕೆ ನೋವಾಗಿದ್ದರೆ ನನ್ನ ಪಕ್ಷದ ಕಾರ್ಯಕರ್ತರಿಗೆ, ನಾಯಕರಿಗೆ ಇಂಡಿಯಾ ಕೂಟದ ನಾಯಕರಲ್ಲಿ ಕ್ಷಮೆ ಕೇಳುತ್ತೇನೆ ಎಂದೂ ಅವರು ಹೇಳಿದರು.

ಹೈಕಮಾಂಡ್ ಆಗಲಿ, ಇತರೆ ಯಾವುದೇ ನಾಯಕರಗಲಿ ನನ್ನನ್ನು ಈ ಬಗ್ಗೆ ಪ್ರಶ್ನೆ ಮಾಡಿಲ್ಲ. ನಾನು ಯಾರ ಮನಸ್ಸಿಗೂ ನೋವು ಮಾಡುವ ಉದ್ದೇಶ ಇರಲಿಲ್ಲ. ವಿರೋಧ ಪಕ್ಷದ ಸಿದ್ಧಾಂತದ ಅರಿವಿದೆ ಎಂಬುದನ್ನು ನಿರೂಪಿಸುವುದಕ್ಕೆ ಹಾಗೆ ಹೇಳಿದ್ದೆ ಅಷ್ಟೆ ಹಾಗೆಯೇ ನಾನು ತಪ್ಪು ಮಾಡಿದ್ದೇನೆ ಎಂದು ಭಾವಿಸುವುದಾದರೆ ಎಲ್ಲರ ಕ್ಷಮೆ ಕೋರುತ್ತೇನೆ ಎಂದರು.

ನಾನು ಹುಟ್ಟಿದ್ದೇ ಕಾಂಗ್ರೆಸ್ಸಿಗನಾಗಿ ನಾನು ಸಾಯುವುದೂ ಕಾಂಗ್ರೆಸ್ಸಿಗನಾಗಿಯೇ ನನ್ನ ಪಕ್ಷ ನಿಷ್ಠೆ ಪಕ್ಷಾತೀತ, ನನ್ನದು ಮತ್ತು ಗಾಂಧಿ ಕುಟುಂಬದ ಸಂಬಂಧ ಭಕ್ತ ಮತ್ತು ಭಗವಂತನ ಸಂಬಂಧ, ನಾನು ಕಾಂಗ್ರೆಸ್ ಪಕ್ಷದ ಕಚೇರಿಯನ್ನು(**2ನೇಪುಟಕ್ಕೆ**)

# ಶ್ರೀ ಕ್ಷೇತ್ರ ಧರ್ಮಸ್ಥಳದ ಅಪಪ್ರಚಾರ ಖಂಡಿಸಿ ಬಿಜೆಪಿ ಪ್ರತಿಭಟನೆ




**ಯುವ ಮಾರ್ಗ ಸುದ್ದಿ**

**ಮಾನ್ವಿ,ಆ.26–**ಶ್ರೀಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಅಪಪ್ರಚಾರವನ್ನು ಖಂಡಿಸಿ ಭಾರತೀಯ ಜನತಾ ಪಕ್ಷ (ಬಿಜೆಪಿ) ಮಾನ್ವಿ ಘಟಕದ ವತಿಯಿಂದ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಗೆ ಮನವಿ ಸಲ್ಲಿಸಲಾಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳವು ಕೇವಲ ಕರ್ನಾಟಕವಲ್ಲದೆ, ದೇಶದಾದ್ಯಂತ ಕೋಟ್ಯಂತರ ಹಿಂದೂ ಭಕ್ತರ ನಂಬಿಕೆ ಮತ್ತು ಶ್ರದ್ಧೆಯ ಕೇಂದ್ರವಾಗಿದೆ. ಕೆಲವು ಕಿಡಿಗೇಡಿಗಳು ಹಾಗೂ ಎಡಪಂಥೀಯರು ದುರುದ್ದೇಶಪೂರ್ವಕವಾಗಿ ಧರ್ಮಸ್ಥಳದ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿ, ಹಿಂದೂಗಳ ಧಾರ್ಮಿಕ ಭಾವನೆಗಳನ್ನು ಅಪಮಾನಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಇಂತಹ ದುಷ್ಕೃತ್ಯಗಳ ಹಿಂದೆ ಹಿಂದೂ ಧರ್ಮವನ್ನು ಕೀಳಾಗಿ ಬಿಂಬಿಸುವ ಹುನ್ನಾರ ಅಡಗಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಬಿಜೆಪಿ ಮುಖಂಡರು, ಒಬ್ಬ ಅನಾಮಿಕ ವ್ಯಕ್ತಿ ಯಾವುದೇ ಆಧಾರವಿಲ್ಲದೆ ಮಾಡಿದ ಆರೋಪಕ್ಕೆ ರಾಜ್ಯ ಕಾಂಗ್ರೆಸ್ ಸರ್ಕಾರ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ತನಿಖೆ ನಡೆಸಿದೆ. ಆದರೆ, ಈ ಆರೋಪದ ಹಿಂದಿರುವ ನಿಜವಾದ ವ್ಯಕ್ತಿಗ 'ಳು ಮತ್ತು ಅವರ ದುಷ್ಟ (**2ನೇಪುಟಕ್ಕೆ**)

# ಉಪ ಲೋಕಾಯುಕ್ತರ ಕಾರ್ಯಕ್ರಮಕ್ಕೆ ಸಮನ್ವಯ ಅತ್ಯಗತ್ಯ: ಲೋಕಾಯುಕ್ತ ಎಸ್ಪಿ ಸತೀಶ್

**ಯುವ ಮಾರ್ಗ ಸುದ್ದಿ**




**ರಾಯಚೂರು,ಆ.26–**ಗೌರವಾನ್ವಿತ ನ್ಯಾಯಮೂರ್ತಿ ಹಾಗೂ ಉಪ ಲೋಕಾಯುಕ್ತರಾದ ಬಿ.ವೀರಪ್ಪ ಅವರು ರಾಯಚೂರ ಜಿಲ್ಲೆಯಲ್ಲಿ ಕೈಗೊಂಡ ಪ್ರವಾಸ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಜಿಲ್ಲಾಡಳಿತದಿಂದ ಅಗತ್ಯ ಸಹಕಾರ ನೀಡಬೇಕು. ಆಯಾ ಇಲಾಖೆಯ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ತಮಗೆ ವಹಿಸಿದ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ರಾಯಚೂರಿನ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಸತೀಶ್ ಎಸ್ ಚಿಟಗುಬ್ಬಿ ಅವರು ಹೇಳಿದರು.

ರಾಯಚೂರು ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿನ ರಜತ್ ಮಹೋತ್ಸವದ ಸಭಾಂಗಣದಲ್ಲಿ ಆಗಸ್ಟ್ 26ರಂದು ಪೂರ್ವಭಾವಿ ಸಿದ್ಧತಾ ಸಭೆ ನಡೆಸಿ ಅವರು ಮಾತನಾಡಿದರು.

ಉಪ ಲೋಕಾಯುಕ್ತರಾದ ಬಿ.ವೀರಪ್ಪ ಅವರು ಆಗಸ್ಟ್ 28ರಂದು ರಾಯಚೂರ ನಗರಕ್ಕೆ ಆಗಮಿಸಿ ಮೂರು ದಿನಗಳ ಕಾಲ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗುವರು. ಮಾನ್ಯ ಉಪ ಲೋಕಾಯುಕ್ತರು ಆಗಸ್ಟ್ 28ರಂದು ವಿವಿಧೆಡೆ ಅನಿರೀಕ್ಷಿತ ಭೇಟಿ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಆಗಸ್ಟ್ 29 ಮತ್ತು ಆಗಸ್ಟ್ 30ರಂದು ವಿವಿಧೆಡೆ ಭೇಟಿ ಮತ್ತು ವೇದಿಕೆಯ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ ಎಂದು ತಿಳಿಸಿದರು.

ಆಗಸ್ಟ್ 29ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1.30ಗಂಟೆವರೆಗೆ ಮತ್ತು ಮಧ್ಯಾಹ್ನ ಊಟದ ವಿರಾಮದ ನಂತರ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸುವರು. ಸಂಜೆ 5.30ರಿಂದ 6.30ರವರೆಗೆ ಕೃಷಿ ವಿವಿಯ ಬಸವೇಶ್ವರ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆಗೆ ಸಂಬಂಧಿಸಿದ ಕಾನೂನು ಸಾಕ್ಷರತಾ ಕಾರ್ಯಕ್ರಮ ನಡೆಯಲಿದೆ. ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶಿಕ್ಷಣ ಇಲಾಖೆ, ರೇಷ್ಮೆ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಉಪನೋಂದಣಿ ಕಚೇರಿ, ಆರ್‌ಟಿಓ ಕಚೇರಿ ಸೇರಿದಂತೆ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದಲ್ಲಿ ಈ ಕಾರ್ಯಕ್ರಮ ಆಯೋಜನೆಯಾಗಿದೆ. ಸಾರ್ವಜನಿಕರ ಅಹವಾಲುಗಳ ಸ್ವೀಕಾರ ಕಾರ್ಯಕ್ರಮಕ್ಕೆ ಬರುವ ಸಾರ್ವಜನಿಕರಿಗೆ ಅಚ್ಚುಕಟ್ಟಾಗಿ ಕುಡಿಯುವ ನೀರು, ಊಟದ ವ್ಯವಸ್ಥೆಯಾಗಬೇಕು ಎಂದು ಸೂಚನೆ ನೀಡಿದರು.

ಆಗಸ್ಟ್ 30ರಂದು ಬೆಳಿಗ್ಗೆ 11ರಿಂದ 1.45 ಗಂಟೆವರೆಗೆ ಕೃಷಿ ವಿವಿಯ ಬಸವೇಶ್ವರ ಸಭಾಂಗಣದಲ್ಲಿ, ಹಿಂದಿನ (**2ನೇಪುಟಕ್ಕೆ**)

# ಜೀವನ ಏಳಿಗೆಗೆ ಶಿಕ್ಷಣ ಮತ್ತು ನೈತಿಕತೆ ಅವಶ್ಯಕ: ಮಂಜುನಾಥ

**ಯುವ ಮಾರ್ಗ ಸುದ್ದಿ**



**ದೇವದುರ್ಗ,ಆ.26–**ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಗ್ರಾಮೀಣ ಮಕ್ಕಳು ಉನ್ನತ ಶಿಕ್ಷಣ ಪಡೆಯಬೇಕು ಎಂದು ಮಂಜುನಾಥ್ ಪಿಐ ಹೇಳಿದರು.

ತಾಲೂಕಿನ ಜಗದರಾಧ್ಯ ಜಯಶಾಂತಲಿಂಗೇಶ್ವರ ಕಲಾ, ವಾಣಿಜ್ಯ ಪಿಯುಸಿ ಮತ್ತು ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಇತ್ತೀಚಿಗೆ ನಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ಸ್ಥಾನ ವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಯಲ್ಲಿ ಭಾಗವಹಿಸಬೇಕು. ಆಧುನಿಕ ಶಿಕ್ಷಣಕ್ಕೆ ತಕ್ಕಂತೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಗಣಕಯಂತ್ರ ಶಿಕ್ಷಣ ನೀಡುವುದರ ಜತೆಗೆ ಅದರ ಮಹತ್ವ ತಿಳಿಸಬೇಕು ಎಂದು ಹೇಳಿದರು. ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಪಾತ್ರ ಮುಖ್ಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆಯನ್ನು ಮಾಡಿ ಕಾಲೇಜಿಗೆ ಮತ್ತು ತಾಲೂಕಿಗೆ ಕೀರ್ತಿ ತರಬೇಕು ಎಂದು ಗೋವಿಂದ ಮಾನಸಗಲ್ ಅಧ್ಯಕ್ಷೀಯ ಸ್ಥಾನವನ್ನು ವಹಿಸಿ ಮಾತನಾಡಿದರು .2023–24 ನೆಯ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಾಲೇಜಿಗೆ ಅತಿಹೆಚ್ಚು ಅಂಕ ಗಳಿಸಿದ ಆಯುಷ್ ಸಿದಿಕಿ ಹಾಗೂ ಕನ್ನಡ ಮತ್ತು ಶಿಕ್ಷಣ ಶಾಸ್ತ್ರದಲ್ಲಿ 100ಕ್ಕೆ 100 ಅಂಕ ಪಡೆದ ರಂಜಿತಾ ಮತ್ತು ಇತಿಹಾಸ ವಿಷಯದಲ್ಲಿ100ಕ್ಕೆ 100 ಅಂಕ ಪಡೆದ ವಿದ್ಯಾ ವಿದ್ಯಾರ್ಥಿಗಳಿಗೆ ಸನ್ಮಾನ ಮತ್ತು ಅಭಿನಂದನ ಪತ್ರವನ್ನು ವಿತರಿಸಲಾಯಿತು ಈ ಸಂದರ್ಭದಲ್ಲಿ ಚಂದ್ರಶೇಖರ್ ಅಕ್ಕರಕಿ ಪ್ರಾಚಾರ್ಯರು ಉಪನ್ಯಾಸಕರಾದ ಗೋವಿಂದ್ ಮಾನಸಗಲ್ ಶಿವರಾಜ್,ಅಂಜನಪ್ಪ ಆಂಜನೇಯ ಮಲ್ಲಿಕಾರ್ಜುನ್ ಶಶಿಕಲಾ ಮಂಜುಳಾ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು . ರೇಣುಕಾ ಮತ್ತು ವೆಂಕಟೇಶ್ ಸ್ವಾಗತಿಸಿದರು. ಶಿವಗಂಗಾ ನಿರೂಪಿಸಿದರು. ಹನುಮಂತಿ ವಂದಿಸಿದರು.

# ಸಂಗಾಪುರ ರಸ್ತೆ ಕಾಮಗಾರಿ ಪ್ರಾರಂಭಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ ಸಚಿವ



**ಯುವ ಮಾರ್ಗ ಸುದ್ದಿ**

**ಮಾನ್ವಿ,ಆ.26–**ಪಟ್ಟಣದ ವಿವಿಧ ವಾರ್ಡ್ಗಳಿಗೆ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್. ಎಸ್. ಬೋಸರಾಜು ಭೇಟಿ ನೀಡಿ ಪರಿಶೀಲಿಸಿದರು ಪಟ್ಟಣದ 1ನೇ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಸಂಗಪುರ ಹಾಗೂ ಕರಡಿಗುಡ್ಡ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣವಾಗಿ ಹಾಳಗಿರುವುದನ್ನು ಕಂಡು ಸ್ಥಳದಲ್ಲಿ ಲೋಕಪಯೋಗಿ ಇಲಾಖೆಯ ಅಭಿಯಂತರರಾದ ಮಕ್ಸುದ್ ರವರಿಗೆ ಸಂಗಪುರ ರಸ್ತೆ ಸಂಪೂರ್ಣವಾಗಿ ಹಾಳಗಿದ್ದು ಮಳೆಗಾಲದಲ್ಲಿ ರಸ್ತೆಯ ಮೇಲೆ ನೀರು ನಿಲ್ಲುತ್ತಿರುವುದರಿಂದ ಸಾರ್ವಜನಿಕರ ಸಂಚರಕ್ಕೆ ತೊಂದರೆಯಾಗುತ್ತಿದ್ದು ಕೂಡಲೇ ರಸ್ತೆ ಹಾಗೂ ಚರಂಡಿ ಕಾಮಗಾರಿಯನ್ನು ಪ್ರಾರಂಭಿಸಿ ಶಿಘ್ರದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲಮಾಡಿಕೊಡುವಂತೆ ಸೂಚನೆ ನೀಡಿದರು.

ಶಾಸಕ ಜಿ.ಹಂಪಯ್ಯನಾಯಕ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ಪಂಚ ಗ್ಯಾರಂಟಿ ಸಮಿತಿಯ ತಾ.ಅಧ್ಯಕ್ಷರಾದ ಬಿ.ಕೆ.ಅಂಬರೇಶಪ್ಪ ವಕೀಲರು. ಮುಖಂಡರಾದ ಕೆ. ಶಾಂತಪ್ಪ ,ಮಹಾಂತೇಶ್ ಪಾಟೀಲ್, ಸೈಯದ್ ಖಾಲಿದ್ ಖಾದ್ರಿ . ಶಾರಣಯ್ಯ ನಾಯಕ್ ಗುಡದಿನ್ನಿ, ರೌಡೂರು ಮಹಾಂತೇಶ ಸ್ವಾಮಿ, ಸೈಯದ್ ನಜರುದ್ದೀನ್ ಖಾದ್ರಿ, ಚಾಂದ್ ಪಾಷ, ಸತ್ತರ ಬಂಗ್ಲೆವಾಲೆ , ದೇವೇಂದ್ರಪ್ಪ ಬೊಮ್ಮನಾಳ, ಇನ್ನಿತರರು ಇದ್ದರು

# ವಿಶ್ವಕರ್ಮ ಜಯಂತಿ ಆಚರಣೆಗೆ ಅಗತ್ಯ ಸಿದ್ಧತೆಯಾಗಲಿ: ಎಡಿಸಿ ಶಿವಾನಂದ ಭಜಂತ್ರಿ

**ಯುವ ಮಾರ್ಗ ಸುದ್ದಿ**



**ರಾಯಚೂರು,ಆ.26–** ಜಿಲ್ಲಾಡಳಿತದಿಂದ ಜಿಲ್ಲಾ ಕೇಂದ್ರದಲ್ಲಿ ಸೆ.17ರಂದು ಆಚರಿಸಲಾಗುವ ವಿಶ್ವಕರ್ಮ ಜಯಂತಿಗೆ ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಭಜಂತ್ರಿ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ವಿಶ್ವಕರ್ಮ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಎಲ್ಲ ತಾಲೂಕು ಸರ್ಕಾರಿ ಕಚೇರಿಗಳು, ಗ್ರಾಮ ಪಂಚಾಯಿತಿಗಳಲ್ಲಿ, ಶಾಲಾ–ಕಾಲೇಜುಗಳು ಹಾಗೂ ವಸತಿ ನಿಲಯಗಳಲ್ಲಿ ವಿಶ್ವಕರ್ಮ ಜಯಂತಿಯನ್ನು ಕಡ್ಡಾಯವಾಗಿ ಆಚರಣೆ ಮಾಡಬೇಕಿದೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ಅಧಿಕಾರಿಗಳು ನಾನಾ ಕಾರ್ಯಸಿದ್ಧತೆಗೆ ಅಗತ್ಯ ಕ್ರಮ ವಹಿಸಬೇಕು. ಎಲ್ಲ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಂದು ಜಿಲ್ಲಾ ಕೇಂದ್ರದಲ್ಲಿ ಸೆ.17ರ ಬೆಳಗ್ಗೆ 09 ಗಂಟೆಗೆ ನಗರದ ಆಕಾಶವಾಣಿ ಕೇಂದ್ರದ ಹತ್ತಿರವಿರುವ ವಿಶ್ವಕರ್ಮ ವೃತ್ತದಿಂದ ಭಾವಚಿತ್ರದ ಮೆರವಣಿಗೆ ನಡೆಯಲಿದೆ. ಬೆಳಗ್ಗೆ 11 ಗಂಟೆಗೆ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗ ಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಮೆರವಣಿಗೆ ಸಾಗುವ ಮಾರ್ಗ ಹಾಗೂ ವೇದಿಕೆ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಹಾನಗರ ಪಾಲಿಕೆಯಿಂದ ಕಲ್ಪಿಸಬೇಕು ಎಂದರು.

ಜಯಂತಿ ಕಾರ್ಯಕ್ರಮದ ವೇದಿಕೆ ಅಲಂಕಾರ, ಗಣ್ಯರಿಗೆ ಪುಸ್ತಕ ವಿತರಣೆ, ಪೂಜೆಗೆ ಹೂವು–ಹಾರಗಳ ವ್ಯವಸ್ಥೆ ಮಾಡಬೇಕು. ಪೊಲೀಸ್ ಇಲಾಖೆಯಿಂದ ಮೆರವಣಿಗೆ ಹಾಗೂ ವೇದಿಕೆ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಸೂಕ್ತ ಬಂದೋಬಸ್ತ್ ಒದಗಿಸಬೇಕು. ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ ಮುದ್ರಿಸಿ ಗಣ್ಯರ ಆಹ್ವಾನಕ್ಕೆ ಕ್ರಮ ವಹಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ವೇದಿಕೆ ಕಾರ್ಯಕ್ರಮದಲ್ಲಿ ವಿಶ್ವಕರ್ಮ ಅವರ ಕುರಿತು ಉಪನ್ಯಾಸ ನೀಡಲು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕರಾದ ಡಾ.ಅಮೃತಾ ಎಸ್.ಬೆನ್ನಾಳ ಅವರಿಗೆ ಆಹ್ವಾನಿಸಲು ನಿರ್ಣಯಿಸಲಾಯಿತು.

ಜಯಂತಿ ಆಚರಣೆ ಕಾರ್ಯಕ್ರಮಕ್ಕೆ ಸಮಾಜದ ಬಂಧುಗಳ (**2ನೇಪುಟಕ್ಕೆ**)

ಮೊದಲನೇಯ ಪುಟದಿಂದ

# ಡಿಕೆಶಿ ಕ್ಷಮೆ ಯಾಚನೆ

ದೇವಾಲಯ ಎಂದುಕೊಂಡಿದ್ದೇನೆ. ಕಾಂಗ್ರೆಸ್ ಪಕ್ಷ ನನಗೆ ಭಗವಂತನಿದ್ದಂತೆ. ನನಗೆ ಯಾರಿಂದಲೂ ಪಾಠದ ಅಗತ್ಯವಿಲ್ಲ ಎಂದರು.

ನಾನು ಕಾಂಗ್ರೆಸ್ ಪಕ್ಷದಲ್ಲಿದ್ದೇನೆ ನಿಜ. ಹಾಗೆಂದು ನಾನು ನನ್ನ ಧರ್ಮವನ್ನು ಬಿಡಲ್ಲ ನನ್ನ ಧರ್ಮದ ಜತೆಗೆ ಇತರ ಧರ್ಮಗಳ ಬಗ್ಗೆಯೂ ನನಗೆ ನಂಬಿಕೆಯಿದೆ. ಮುಸ್ಲಿಂ ಕ್ರಿಶ್ಚಿಯನ್ ಇತರ ಧರ್ಮಗಳ ಬಗ್ಗೆ ಗೌರವ ಹೊಂದಿದ್ದೇನೆ ಇವೆಲ್ಲದ್ದಕ್ಕಿಂತಲೂ ಮಾನವ ಧರ್ಮದ ಮೇಲೆ ನನಗೆ ಹೆಚ್ಚು ನಂಬಿಕೆ ಎಂದು ಡಿಕೆ ಶಿವಕುಮಾರ್ ಹೇಳಿದರು.

ನಾನು ಕ್ಷಮೆ ಕೇಳುವಂತ ತಪ್ಪು ಮಾಡಿಲ್ಲ, ನನ್ನನ್ನು ಹೈಕಮಾಂಡ್ ಸೇರಿದಂತೆ ಯಾರೂ ಪ್ರಶ್ನೆ ಮಾಡಿಲ್ಲ. ಈ ವಿಚಾರವಾಗಿ ರಾಜಕೀಯ ಬೇಡ ಎಲ್ಲವನ್ನೂ ಇಲ್ಲಿಗೆ ಮುಗಿಸೋಣ, ಹರಿಪ್ರಸಾದ್ ಅವರ ಬಳಿಯೂ ಕ್ಷಮೆ ಕೋರಬೇಕು ಎಂದಿದ್ದರೆ ಕೋರೋಣ ಎಂದರು.

ನಾನು 47ನೇ ವರ್ಷದಲ್ಲಿ ರಾಜಕೀಯ ಶಾಸ್ತ್ರದಲ್ಲಿ ಪದವಿ ಪಡೆದಿದ್ದೇನೆ. ಎಲ್ಲ ಪಕ್ಷಗಳ ಅಧ್ಯಯನ ಮಾಡಿದ್ದೇನೆ. ಕಮ್ಯುನಿಸ್ಟ್, ಬಿಜೆಪಿ, ಜೆಡಿಎಸ್, ಆರ್‌ಎಸ್‌ಎಸ್ ಎಲ್ಲರ ಸಿದ್ಧಾಂತದ ಬಗ್ಗೆ ತಿಳಿದಿದ್ದೇನೆ. ಮುಸ್ಲಿಂ ಲೀಗ್ ಕಾನ್ಫರೆನ್ಸ್‌ಗೂ ಹೋಗಿದ್ದೇನೆ.

ಅವರ ಶಿಸ್ತು ಕಂಡು ಬೆರಗಾಗಿದ್ದೇನೆ ಎಂದರು. ಕಾಂಗ್ರೆಸ್ ಪಕ್ಷದ ಕಟ್ಟಾಳು ಆಗಿ ನಾನು ಕೆಲಸ ಮಾಡಿದ್ದೇನೆ. ನನ್ನ ಹೋರಾಟ ಬಹಳ ಇದೆ. ಇದನ್ನು ಯಾರೂ ಸರಿ ದೂಗಿಸಲು ಆಗಲ್ಲ.ಈ ಹಿಂದೆ ಮಹಾರಾಷ್ಟ್ರದಲ್ಲಿ ವಿಲಾಸ್‌ರಾವ್ ದೇಶ್‌ಮುಖ್ ಸರ್ಕಾರದ ಪತನದ ವೇಳೆ ಮಹಾರಾಷ್ಟ್ರ ಶಾಸಕರನ್ನು ರಾಜ್ಯಕ್ಕೆ ಕರೆತಂದು ಪಕ್ಷದ ಪರ ಕೆಲಸ ಮಾಡಿದ್ದೆ.

ಆಗ ನಾನು ಜಿಂಕೆ ಮಾಂಸ ಹಂಚಿದೆ ಎಂದು ವಿವಾದ ಮಾಡಿದ್ದರು. ಗುಜರಾತ್‌ನ ರಾಜ್ಯಸಭಾ ಚುನಾವಣಾ ಸಂದರ್ಭದಲ್ಲೂ ಪಕ್ಷ ನೀಡಿದ ಜವಾಬ್ದಾರಿಯಂತೆ ಗುಜರಾತ್ ಸರ್ಕಾರದ ಶಾಸಕರನ್ನು ರಾಜ್ಯಕ್ಕೆ ಕರೆತಂದಿದ್ದೆ.

ನಂತರ ನನ್ನ ಮೇಲೆ ಇಡಿ ದಾಳಿ ನಡೆಸಿ ಪ್ರಕರಣಗಳನ್ನು ದಾಖಲಿಸಿ ತಿಹಾರ್ ಜೈಲಿಗೆ ಕಳುಹಿಸಿದರು. ಜೈಲಿನಲ್ಲಿ ನನಗೆ ಒಂದು ಕುರ್ಚಿ ಸಹ ಕೊಡಲಿಲ್ಲ. 10*10 ಅಗಲದ ರೂಮಿನಲ್ಲಿ ಇದ್ದೆ ನಾನು ಎಷ್ಟು ಹಿಂಸೆ ಅನುಭವಿಸಿದೆ ಎಂದು ನನಗೆ ಗೊತ್ತಿದೆ. ಅದೆಲ್ಲ ಈಗ ಸುಪ್ರೀಂಕೋರ್ಟ್ ನನ್ನ ಪ್ರಕರಣಗಳನ್ನು ವಜಾ ಮಾಡಿದೆ. ಈಗ ಅದೆಲ್ಲ ಬೇಡ, ನಾನು ಯಾರನ್ನೂ ನೋಯಿಸಿಲ್ಲ. ಎಲ್ಲರಿಗೂ ಹೇಳುತ್ತೇನೆ ಇದರಲ್ಲಿ ರಾಜಕಾರಣ ಬೇಡ ಇಲ್ಲಿಗೆ ಎಲ್ಲದ್ದಕ್ಕೂ ತೆರೆ ಎಳೆಯುತ್ತೇನೆ ಎಂದರು.

ಸಾಫ್ಟ್ ಹಿಂದುತ್ವವೇ ನಿಮಗೆ ಮುಳುವಾಯಿತಾ ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಡಿಕೆ ಶಿವಕುಮಾರ್ ಅವರು ನಾನು ಬೆಳಿಗ್ಗೆ ಮಂಜುನಾಥನ ಬೊಟ್ಟು ಇಟ್ಟುಕೊಂಡು ಬಂದಿದ್ದೇನೆ. ಮಾತು ಬಿಡದ ಮಂಜುನಾಥ ಕಾಸು ಬಿಡದ ತಿಮ್ಮಪ್ಪ ನಾನು ಬೆಳಿಗ್ಗೆ ಎದ್ದರೆ ಅಜ್ಜಯ್ಯನ ಪೂಜೆ ಮಾಡಿ ಬರುತ್ತೇನೆ. ಈಗಲೂ ವಿಭೂತಿ ಧರಿಸಿದ್ದೇನೆ ನನ್ನ ಧರ್ಮ ಬಿಡಲ್ಲ ಎಂದರು.

# ವಿಶ್ವಕರ್ಮ ಜಯಂತಿ ಆಚರಣೆಗೆ ಅಗತ್ಯ ಸಿದ್ಧತೆಯಾಗಲಿ: ಎಡಿಸಿ ಶಿವಾನಂದ ಭಜಂತ್ರಿ

ಸಹಕಾರವೂ ಅಗತ್ಯವಿದ್ದು, ಜಿಲ್ಲಾಡಳಿತದೊಂದಿಗೆ ಸಹಕರಿಸಿ ವ್ಯವಸ್ಥಿತ ಜಯಂತಿ ಆಚರಣೆಗೆ ಎಲ್ಲರೂ ಅನುಕೂಲ ಮಾಡಿಕೊಡಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಸಮಾಜದ ಮುಖಂಡರಲ್ಲಿ ಕೋರಿದರು.

ಇದೇ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ, ಎಇಇಯಾದ ಈರಣ್ಣ ಬಡಿಗೇರ, ಹಿರಿಯ ಪತ್ರಕರ್ತ ಮಾರುತಿ ಬಡಿಗೇರ್, ಸಮಾಜದ ಮುಖಂಡರಾದ ಬ್ರಹ್ಮ ಗಣೇಶ ವಕೀಲರು, ಕೆ.ರಾಮು ಗಾಣಧಾಳ, ಬಾಬಣ್ಣ, ಎ.ಈಶ್ವರ ವಿಶ್ವಕರ್ಮ, ಮನೋಹರ ಬಡಿಗೇರ, ವೆಂಕಟೇಶ ಅನ್ವರಿ, ಕುಂಡಾಪುರ ವೆಂಕಟೇಶ, ಬ್ರಹ್ಮಯ್ಯ, ಎ.ಶ್ರೀನಿವಾಸ್ ಬಡಿಗೇರ್, ಜಯಂತ್ ಆಚಾರಿ, ಡಾ.ರವಿ ಮಸ್ಕಿ, ಮೌನೇಶ, ಕೆ.ಪ್ರಾಣೇಶ್, ನರಸಪ್ಪ ಕಂಬಾರ, ಅನಂತಶಯ, ರಘು, ಶ್ರೀಕಾಂತ್, ರವಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ಸಭೆಯಲ್ಲಿ ಇದ್ದರು.

# ಉಪ ಲೋಕಾಯುಕ್ತರ ಕಾರ್ಯಕ್ರಮಕ್ಕೆ ಸಮನ್ವಯ ಅತ್ಯಗತ್ಯ: ಲೋಕಾಯುಕ್ತ ಎಸ್ಪಿ ಸತೀಶ್

ದಿನ ಅಂದರೆ ಆಗಸ್ಟ್ 29ರಂದು ಸಾರ್ವಜನಿಕರು ವ್ಯಕ್ತಪಡಿಸಿ ಬಾಕಿ ಇರುವ ದೂರುಗಳು ಮತ್ತು ಕುಂದುಕೊರತೆಗಳ ಬಗ್ಗೆ ದೂರುದಾರರು ಹಾಗೂ ಪ್ರತಿವಾದಿಗಳ ಸಮ್ಮುಖದಲ್ಲಿ ಮಾನ್ಯ ಉಪ ಲೋಕಾಯುಕ್ತರು ರಾಯಚೂರಿಗೆ ಸಂಬಂಧಿಸಿದ ಬಾಕಿ ಇರುವ ದೂರುಗಳ ವಿಚಾರಣೆ ಮತ್ತು ವಿಲೇವಾರಿ ನಡೆಸುವರು ಎಂದು ತಿಳಿಸಿದರು.

ಇದೆ ವೇಳೆ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಮಾತನಾಡಿ, ಗೌರವಾನ್ವಿತ ಉಪಲೋಕಾಯುಕ್ತರ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಭೆ ನಡೆಸಿ ಅಧಿಕಾರಿಗಳಿಗೆ ಕಾರ್ಯ ಹಂಚಿಕೆ ಮಾಡಲಾಗಿದೆ. ಅದರಂತೆ ಪ್ರತಿಯೊಂದು ಸಮಿತಿಯಲ್ಲಿನ ಅಧಿಕಾರಿಗಳು ಮುತುವರ್ಜಿಯಿಂದ ಕಾರ್ಯ ನಿರ್ವಹಿಸಬೇಕು ಎಂದು ಸೂಚನೆ ನೀಡಿದರು.

ಗೌರವಾನ್ವಿತ ಉಪಲೋಕಾಯುಕ್ತರ ಕಾರ್ಯವ್ಯಾಪ್ತಿಗೆ ಒಳಪಡುವ ಪ್ರಕರಣಗಳಲ್ಲಿ ರಾಯಚೂರು ಜಿಲ್ಲೆಗೆ ಸಂಬಂಧಪಟ್ಟಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ ತನಿಖೆ ಅಥವಾ ವಿಚಾರಣೆಗೆ ಬಾಕಿಯಿರುವ ಪ್ರಕರಣಗಳ ಬಗ್ಗೆ ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿ ಉಪಲೋಕಾಯುಕ್ತರು ವಿಚಾರಣೆ ನಡೆಸಲಿದ್ದು, ಆಯಾ ಇಲಾಖೆಯ ಅಧಿಕಾರಿಗಳು, ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ ತನಿಖೆ ಅಥವಾ ವಿಚಾರಣೆಗೆ ಬಾಕಿಯಿರುವ ಪ್ರಕರಣಗಳ ಬಗ್ಗೆ ವಿಶೇಷ ಗಮನ ಹರಿಸಿ ವಿಚಾರಣೆಗೆ ಹಾಜರಾಗಬೇಕು ಎಂದು ಸಭೆಯ ಮೂಲಕ ಸೂಚನೆ ನೀಡಿದರು.

ಸಭೆಯಲ್ಲಿ ಸಹಾಯಕ ಆಯುಕ್ತರಾದ ಗಜಾನನ ಬಾಳೆ, ಲೋಕಾಯುಕ್ತ ಡಿಎಸ್ಪಿ ವಸಂತಕುಮಾರ, ಲೋಕಾಯುಕ್ತ ಡಿವೈಎಸ್ಪಿ ರವಿ ಪುರುಷೋತ್ತಮ, ತಹಸೀಲ್ದಾರರಾದ ಸುರೇಶ ವರ್ಮಾ, ಅಮರೇಶ ಬಿರಾದಾರ, ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿ ಡಾ.ರೋಣಿ ಪಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

# ಶ್ರೀ ಕ್ಷೇತ್ರ ಧರ್ಮಸ್ಥಳದ ಅಪಪ್ರಚಾರ ಖಂಡಿಸಿ ಬಿಜೆಪಿ ಪ್ರತಿಭಟನೆ

ಸಂಚಿನ ಬಗ್ಗೆ ಸರ್ಕಾರ ಜನತೆಗೆ ಯಾವುದೇ ಮಾಹಿತಿ ನೀಡಿಲ್ಲ ಎಂದು ಹೇಳಿದರು. ಕಾಂಗ್ರೆಸ್ ಸರ್ಕಾರವು ಹಿಂದೂಗಳ ಭಕ್ತಿ ಭಾವನೆಗಳಿಗೆ ಧಕ್ಕೆ ತರುವ ಹುನ್ನಾರವನ್ನು ನಿರಂತರವಾಗಿ ಮಾಡುತ್ತಿದೆ. ಈ ವಿಷಯದಲ್ಲಿ ವಿಫಲವಾಗಿರುವ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ರಾಜ್ಯದ ಜನರ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಅಪಪ್ರಚಾರವನ್ನು ಕೂಡಲೇ ನಿಲ್ಲಿಸಬೇಕು,ಅಪಪ್ರಚಾರದ ಹಿಂದಿರುವ ವ್ಯಕ್ತಿಗಳನ್ನು ಪತ್ತೆ ಹಚ್ಚಿ ಶಿಕ್ಷೆಗೆ ಒಳಪಡಿಸಬೇಕು,ಹಿಂದೂಗಳ ಶ್ರದ್ಧಾ ಕೇಂದ್ರಗಳನ್ನು ಅವಮಾನಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು,ಸರ್ಕಾರದ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾನ್ವಿ ಬಿಜೆಪಿ ಮಂಡಲ ತಾಲೂಕ ಅಧ್ಯಕ್ಷ ವೀರಭದ್ರಪ್ಪ ಗೌಡ ಬೋಗಾವತಿ, ಸಿರವಾರ ಮಂಡಲ ಅಧ್ಯಕ್ಷ ಸುರೇಶ್ ಗೌಡ , ಪ್ರಧಾನ ಕಾರ್ಯದರ್ಶಿ ಗುರುಸಿದ್ದಪ್ಪ ಕಣ್ಣೂರು, ಹನುಮೇಶ್ ನಾಯಕ್ ಜಿನೂರು, ನಾಗರಾಜ್ ಭಂಡಾರಿ, ಮಲ್ಲಿಕಾರ್ಜುನ್ ಜಕ್ಕಲದಿನ್ನಿ, ಅಯ್ಯಪ್ಪ ನಾಯಕ್ ಮ್ಯಾಕಲ್, ವಿಶ್ವನಾಥ್, ತಿಮ್ಮನಗೌಡ ಪಾಟೀಲ್, ಅಮರೇಶ್ ನಾಯಕ್, ಬಸವರಾಜ್ ನಕ್ಕುಂದಿ ಸೇರಿದಂತೆ ನೂರಾರು ಕಾರ್ಯಕರ್ತರು ಇದ್ದರು.

# ದೇವರ ಮೂರ್ತಿ ಕಳ್ಳತನ

**ಜಮಖಂಡಿ,ಅ.26–** ತಾಲೂಕಿನ ಮರೆಗುದ್ದಿ ಗ್ರಾಮದಲ್ಲಿ ದೇವರ ಮೂರ್ತಿಯನ್ನೇ ಕಳ್ಳತನ ಮಾಡಿರುವ ಘಟನೆ ತಡರಾತ್ರಿಯಲ್ಲಿ ಜರುಗಿದೆ.

ಗ್ರಾಮದ ದಿಗಂಬೇಶ್ವರ ಸಂಸ್ಥಾನ ಮಠದಲ್ಲಿ ತಡ ರಾತ್ರಿ ದೇವಸ್ಥಾನದಲ್ಲಿ ಈ ಘಟನೆ ನಡೆದಿದೆ. ದೇವಸ್ಥಾನದ ಮುಖ್ಯ ದ್ವಾರದ ಮೂಲಕವೇ ದೇವಸ್ಥಾನದಲ್ಲಿ ಪ್ರವೇಶ ಮಾಡಿರುವ ಕಳ್ಳರು ದೇವಾಲಯದಲ್ಲಿದ ಸುಮಾರು 8 ಕೆಜಿ ಬೆಳ್ಳಿಯ ಮೂರ್ತಿ ಹಾಗೂ ದೇವರ ಹುಂಡಿಯನ್ನು ಕದ್ದು ಪರಾರಿಯಾಗಿದ್ದಾರೆ. ಮೂರ್ತಿಗೆ ಬಂಗಾರದ ಕಣ್ಣುಬಟ್ಟುಗಳು ಕೂಡ ಇದ್ದವು ಎಂದು ತಿಳಿದು ಬಂದಿದೆ.ದೇವರನ್ನೂ ಬಿಡದ ಖದೀಮರು

ಸ್ಥಳಕ್ಕೆ ಸಿ.ಪಿ.ಐ ಮಲ್ಲಪ್ಪ ಮಡ್ಡಿ ಹಾಗೂ ಗ್ರಾಮಿಣ ಪೊ?ಲಿಸ ಠಾಣೆ ಪಿ.ಎಸ್.ಐ ಗಂಗಾಧರ ಪೂಜೆರಿ ಅವರ ಪೊ?ಲಿಸ ತಂಡ ಹಾಗೂ ಶ್ವಾನ ದಳ, ಹಾಗೂ ಬೆರಳಚ್ಚು ತಜ್ಞರು ಆಗಮಿಸಿ ಪರಿಶೀಲನೆ ನಡೆಸಿದ್ದಾರೆ.

# ಸಂಗಪ್ಪ ಶೆಟ್ಟಿ ಸಾಧನೆ ಕಲ್ಯಾಣ ಕರ್ನಾಟಕದ ಹೆಮ್ಮೆಶೆಟ್ಟಿ ಸಿನಿಮಾಗೆ ರಾಷ್ಟ್ರೀಯ ಐ ಮ್ಯಾಕ್ಸ್ ಸಿನಿ ಪ್ರಶಸ್ತಿ

**ಕಲಬುರಗಿ,ಆ.26–** ರಾಷ್ಟ್ರೀಯ ಮಟ್ಟದ " ಐ ಮ್ಯಾಕ್ಸ್ ಬಿಗ್ ಸಿನಿಮಾ  2025 "ಪ್ರಶಸ್ತಿ ಪುರಸ್ಕೃತರಾದ ಕಲಬುರಗಿಯ ಶೆಟ್ಟಿ ಸಿನಿಮಾಸ್ ನ ಆಡಳಿತ ನಿರ್ದೇಶಕರಾದ ಯುವ ಉದ್ಯಮಿ ಸಂಗಪ್ಪ ಗಿರಿಜಾ ಶಂಕರ್ ಶೆಟ್ಟಿಯವರು ಯುವಕರ ಐಕಾನ್ ಆಗಿ ಹೆಮ್ಮೆ ತಂದಿದ್ದಾರೆ ಎಂದು ದಿಶಾ ಕಾಲೇಜಿನ ಅಧ್ಯಕ್ಷ ಶಿವಾನಂದ ಖಜೂರಗಿ ತಿಳಿಸಿದ್ದಾರೆ.



ಕಲಬುರಗಿಯ ಶೆಟ್ಟಿ ಸಿನಿಮಾ ಥಿಯೇಟರ್ ಸಭಾಂಗಣದಲ್ಲಿ ಐ ಮ್ಯಾಕ್ಸ್ ಬಿದ್ದು ಸಿನಿಮಾ ಪ್ರಶಸ್ತಿ ಪಡೆದ ಸಂದರ್ಭದಲ್ಲಿ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ ರಾಷ್ಟ್ರದ ಎರಡನೇ ಹಂತದ ನಗರಗಳಲ್ಲಿರುವ ಅತ್ಯುತ್ತಮ ಸಿನೆಮಾ ಥಿಯೇಟರ್ ಎಂಬ ಹೆಗ್ಗಳಿಕೆಗೆ ಕಲಬುರಗಿ ಪಾತ್ರವಾಗಿ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದು ಭಾರತದ ರಂಗಭೂಮಿ ಮನರಂಜನಾ ನಕಾಶೆಯಲ್ಲಿ ಕಲಬುರಗಿಯ ಹೆಸರು ದಾಖಲೆ ಮಾಡಿರುವ ಹೆಗ್ಗಳಿಕೆ ಸಂಗಪ್ಪ ಶೆಟ್ಟಿಯವರಿಗೆ ಸಲ್ಲುತ್ತದೆ. ಇವರಂತಹ ಯುವಶಕ್ತಿಯಿಂದ ಮಾತ್ರ ಬದಲಾವಣೆ ಸಾಧ್ಯವಾಗಿದ್ದು ಕಲಬುರಗಿಗೆ ಸಿನಿಮಾರಂಗದ ಮನರಂಜನಾ ಕ್ಷೇತ್ರ ದಲ್ಲಿ ಮಾಡಿದ ಸಾಧನೆಯಂತೆ ಕ್ರೀಡಾ ಕ್ಲಬ್ ಕೂಡಾ ಆರಂಭಿಸಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ನಾಗರಿಕ ಸನ್ಮಾನ ಅಗತ್ಯ: ನಿರಗುಡಿ

ಕಲಬುರಗಿಯ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ರಾಷ್ಟ್ರೀಯ ಮಟ್ಟದ ಇಂತಹ ಗಮನಾರ್ಹ ಸಾಧನೆ ಮಾಡಿ ಕೀರ್ತಿಪತಾಕೆ ಹಾರಿಸಿದ ಯುವ ಶಕ್ತಿಯ ಪ್ರತಿನಿಧಿಯಾದ ಉದ್ಯಮಿ ಸಂಗಪ್ಪ ಶೆಟ್ಟಿಯವರು

ಐಮ್ಯಾಕ್ಸ್ ಪ್ರಶಸ್ತಿ ಪಡೆದ ಸಂದರ್ಭದಲ್ಲಿ ನಾಗರಿಕ ಸನ್ಮಾನ ಮಾಡಿ ಗೌರವಿಸಬೇಕಾಗಿದೆ. ವಿದೇಶಗಳಲ್ಲಿರುವ ಥಿಯೇಟರ್ ಗಳಿಗೆ ಸಮಾನ ದರ್ಜೆಯಲ್ಲಿರುವ ಭವ್ಯವಾದ ಶೆಟ್ಟಿ ಥಿಯೇಟರ್ ನಮಗೆ ಹೆಮ್ಮೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯ ಬಿ.ಎಚ್ ನಿರಗುಡಿ ಹೇಳಿದರು.

ಪ್ರಶಸ್ತಿಯು ಕಲಬುರಗಿ ಪ್ರಗತಿಗೆ ಮಾನದಂಡ : ನಿಂಗಣ್ಣ

ಕಲಬುರಗಿಯಲ್ಲಿ ಅಂತರಾಷ್ಟ್ರೀಯ ಮಟ್ಟದ ದರ್ಜೆಯಲ್ಲಿ ಥಿಯೇಟರ್ ನಿರ್ಮಾಣ ಮಾಡಿ ಸಿಂಗಾಪುರ್, ದುಬೈ ನಗರಗಳಲ್ಲಿರುವಂತೆ ಅನುಭವವನ್ನು ಕೊಡುವ ಸಾಧನೆಗೆ ಈಗ ಗೌರವ ಸಂದಿರುವುದು ಹೆಮ್ಮೆಯ ಸಂಗತಿ ಮತ್ತು ಇದು ಸಿನಿಮಾ ವೀಕ್ಷರಿಗೆ ದೊರೆತ ಮನ್ನಣೆಯಾಗಿದೆ. ಇದರಿಂದಾಗಿ ಕಲಬುರಗಿ ಹಿಂದುಳಿದಿಲ್ಲ ಮತ್ತು ಪ್ರಗತಿಯ ಮಾನದಂಡವಾಗಿ ಈ ಪ್ರಶಸ್ತಿಯನ್ನು ಗುರುತಿಸಲಾಗಿದೆ ಎಂದು ಹಿರಿಯ ಸಾಹಿತಿ ಡಾ. ಚಿ. ಸಿ. ನಿಂಗಣ್ಣ ಹೇಳಿದರು.

ಸಾಧನೆಗೆ ಗೌರವದ ಪುರಸ್ಕಾರ: ಮಾಲಿ ಪಾಟೀಲ್

ಸಿನಿಮಾ ಮಂದಿರಗಳಿಗೆ ಸಿನಿಪ್ರಿಯರು ಕಾಲಿಡುತ್ತಿಲ್ಲ ಎಂಬ ಆತಂಕದ ನಡುವೆ ಯುವ ಉದ್ಯಮಿ ಸಂಗಪ್ಪ ಶೆಟ್ಟಿಯವರು ಕಲಬುರಗಿಯಲ್ಲಿ ವಿಶ್ವ ದರ್ಜೆಯ ಥಿಯೇಟರ್ ನಿರ್ಮಾಣ ಮಾಡಿ ಸಿನಿಪ್ರಿಯರನ್ನು ಥಿಯೇಟರ್ ಗೆ ಆಕರ್ಷಿಸುವಂತೆ ಮಾಡಿರುವುದು ಮೆಚ್ಚಲೇ ಬೇಕಾದ ಸಂಗತಿಯಾಗಿದ್ದು ರಾಷ್ಟ್ರೀಯ ಮಟ್ಟದ ಪುರಸ್ಕಾರದಿಂದ ಕಲ್ಯಾಣ ಕರ್ನಾಟಕದ ಭಾಗಕ್ಕೆ ಗರಿಮೆ ಮೂಡಿದೆ ಎಂದು ಕರ್ನಾಟಕ ಜಾನಪದ ಪರಿಷತ್ ನ ಜಿಲ್ಲಾಧ್ಯಕ್ಷ ಸಿ. ಎಸ್. ಮಾಲಿ ಪಾಟೀಲ್ ಹೇಳಿದರು.

ಕಾರ್ಯಕ್ರಮದಲ್ಲಿ ಸ್ವಾಗತ ಕೋರಿ ಪ್ರಾಸ್ತಾವಿಕವಾಗಿ ಮಾತನಾಡಿದ ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಮುಖ್ಯಸ್ಥ ಡಾ. ಸದಾನಂದ ಪೆರ್ಲ ಮಾತನಾಡಿ ಸ್ಪರ್ಧಾತ್ಮಕ ರಂಗದಲ್ಲಿ ರಾಷ್ಟ್ರೀಯ ಮಟ್ಟದ ಪುರಸ್ಕಾರವನ್ನು ಕಲಬುರಗಿಗೆ ತಂದು ಕೊಡುವಲ್ಲಿ ಯಶಸ್ವಿಯಾದ ಸಂಗಪ್ಪ ಶೆಟ್ಟಿ ಅವರ ಸಾಧನೆಯನ್ನು ಎಲ್ಲರೂ ಸಂಭ್ರಮಿಸುವಂತಾಗಿದೆ. ಕೀಳರಿಮೆ ಬಿಟ್ಟು ಸಾಧನೆ ಮಾಡಿದರೆ ಯಶಸ್ಸು ಸಾಧ್ಯ ಎಂಬುದಕ್ಕೆ ಈ ರಾಷ್ಟ್ರೀಯ ಪ್ರಶಸ್ತಿಯು ಸಾಕ್ಷಿ ಮತ್ತು ಪ್ರೇರಣೆ ಎಂದರು. ನಂತರ ಸಂಗಪ್ಪ ಶೆಟ್ಟಿಯವರನ್ನು ಮೈಸೂರು ಪೇಟ, ಶಾಲು, ಹಾರ ಫಲಪುಷ್ಪ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಖ್ಯಾತ ಉದ್ಯಮಿಗಳಾದ ಸತೀಶ್ ವಿ ಗುತ್ತೇದಾರ್, ಮಹಾದೇವ ಗುತ್ತೇದಾರ್, ವೆಂಕಟೇಶ ಕಡೇಚೂರ್, ಡಾ. ವಿನಯ್ ಗುತ್ತೇದಾರ್ ಗಾರಂಪಳ್ಳಿ, ಜಿಲ್ಲಾ ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷರಾದ ನರಸಿಂಹ ಮೆಂಡನ್, ರಾಜೇಶ್ ಡಿ ಗುತ್ತೇದಾರ್, ಅನಿಲ್ ಯರಗೋಳ, ಕುಪೇಂದ್ರ ಗುತ್ತೇದಾರ್ ತಡಕಲ್, ಅಂಬಯ್ಯ ಗುತ್ತೇದಾರ್ ಇಬ್ರಾಹಿಂಪುರ್ ಮತ್ತಿತರರು ಉಪಸ್ಥಿತರಿದ್ದರು.

# ಬಾಗಿಲಕೊಂಡಿ ಮುರಿದು ನಗದು, ಆಭರಣ ಕಳವು

**ಕಲಬುರಗಿ,ಆ.26–** ಇಲ್ಲಿನ ಅಶೋಕ ನಗರ ಪೊಲೀಸ್ ಠಾಣೆಯ ವ್ಯಾಪ್ತಿಯ ಪಾರ್ವತಿ ಲೇಔಟ್ ಪ್ರದೇಶದ ಮನೆಯೊಂದರಲ್ಲಿ ಕಳ್ಳತನ ನಡೆದಿದೆ.



ಪಾರ್ವತಿ ಲೇಔಟ್ ನ ನಿವಾಸಿ ಶರಣಬಸಪ್ಪ ಶಂಕ್ರಪ್ಪ ಚೌಧರಿ ಎಂಬಾತರ ಮನೆಯಲ್ಲೇ ಕಳ್ಳತನವಾಗಿದ್ದು,43 ಗ್ರಾಂ. ಬಂಗಾರದ ಆಭರಣಗಳು, 150 ಗ್ರಾಂಬೆಳ್ಳಿ ಹಾಗೂ 1 ಲಕ್ಷ ರೂಪಾಯಿ ನಗದು ಹಣ ಕಳ್ಳತನವಾಗಿದೆ.

ಶನಿವಾರ ತಡರಾತ್ರಿ ವೇಳೆಗೆ ಕಳ್ಳರು ಮನೆಯ ಬಾಗಿಲಿನ ಕೊಂಡಿ ಮುರಿದು ಒಳಗೆ ಪ್ರವೇಶಿಸಿ ಮನೆಯ ಅಲಮಾರಿನಲ್ಲಿಟ್ಟಿದ್ದ 1 ಲಕ್ಷ ರೂ. ನಗದು, 15 ಗ್ರಾಂನ ಬಂಗಾರದ ಲಾಕೆಟ್, 5 ಗ್ರಾಂನ 3 ಸುತ್ತುಂಗುರಗಳು, 5 ಗ್ರಾಂನ ಒಂದು ಜೊತೆ ಕಿವಿಯೊಲೆ, 3 ಗ್ರಾಂನ ಉಂಗುರ, 5 ಗ್ರಾಂನ ನಾಣ್ಯ ಸೇರಿದಂತೆ 150 ಗ್ರಾಂ. ಬೆಳ್ಳಿಯ ಆಭರಣಗಳನ್ನು ಕಳವುಗೈದಿದ್ದಾರೆ ಎಂದು ಸಂತ್ರಸ್ತರು ದೂರಿನಲ್ಲಿ ತಿಳಿಸಿದ್ದಾರೆ.

ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಅನುಮಾನಾಸ್ಪದ ವ್ಯಕ್ತಿಗಳು ಕಳ್ಳತನಕ್ಕೆ ಕಸರತ್ತು ನಡೆಸುತ್ತಿರುವ ಸಿಸಿ ಕ್ಯಾಮೆರಾದ ದೃಶ್ಯಾವಳಿ ವೈರಲ್ ಆಗುತ್ತಿದೆ.

ಈ ಕುರಿತು ಪ್ರಕರಣ ದಾಖಲಿಸಿಕೊಂಡ ಅಶೋಕ್ ನಗರ ಪೊಲೀಸರು, ಅನುಮಾನಾಸ್ಪದ ವ್ಯಕ್ತಿಗಳ ಪತ್ತೆಗೆ ಬಲೆ ಬೀಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

# ಬಿ.ವಿ. ಭೂಮರಡ್ಡಿ ಮಹಾವಿದ್ಯಾಲಯ ಎನ್.ಸಿ.ಸಿ. ಕೆಡೆಟ್ಗಳಿಂದ ರಕ್ತದಾನ

**ಬೀದರ,ಅ.26–** ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಶಿವಶಕ್ತಿ ಭುವನ, ರಾಂಪುರೆ ಕಾಲೊನಿ, ಬೀದರ ಶಾಖೆಯ ಆಶ್ರಯದಲ್ಲಿ ರಾಜಯೋಗಿನಿ ದಾದಿ ಪ್ರಕಾಶಮಣಿಯವರ 18ನೆಯ ಪುಣ್ಯಸ್ಮರಣೆ ಅಂಗವಾಗಿ ಇಡೀ ಭಾರತ ಮತ್ತು ನೇಪಾಳ ದೇಶದ 6000 ಶಾಖೆಗಳಿಂದ ರಕ್ತದಾನ ಶಿಬಿರವನ್ನು ಶಾಖೆಯ ಪ್ರಮುಖರಾದ ಬಿ.ಕೆ ಸುಮಂಗಲ ಬಹೆನ್ ಜೀ, ಬಿ.ಕೆ ಸುನಂದಾ ಬಹೆನ್ ಜೀ, ಹಾಗೂ ಬಿ.ಕೆ ಪಾರ್ವತಿ ಬಹೆನ್ ಜೀ, ಅವರ ಮಾರ್ಗದರ್ಶನದಲ್ಲಿ ಆಯೋಜಿಸಲಾಯಿತು. ಈ ಶಿಬಿರದಲ್ಲಿ ಬಿ.ವಿ.ಬಿ ಮಹಾವಿದ್ಯಾಲಯದ ಎನ್.ಸಿ.ಸಿ. ಕಡೆಯಟ್ಸ್ ಉತ್ಸಾಹ 'ದಿಂದ ಭಾಗವಹಿಸಿ ರಕ್ತದಾನ ಮಾಡುವುದರ ಮೂಲಕ ಮಾನವೀ ಯ ಸೇವೆಗೆ ಮಾದರಿಯಾದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಸಮಾಜಸೇವಕರಾದ ಶ್ರೀ ಶಿವಶರಣಪ್ಪ ವಾಲಿ, ಶಿಕ್ಷಣ ತಜ್ಞರಾದ ಶ್ರೀ ಬಿ. ಜಿ. ಶೇಟಕಾರ್, ಹಾಗೂ ಬಸವರಾಜ ಜಾಬಶೆಟ್ಟಿ ಹಾಜರಿದ್ದು, ರಕ್ತದಾನದ ಮಹತ್ವವನ್ನು ಹಿರಿದಾಗಿ ವಿವರಿಸಿದರು. ಅವರು ಯುವಕರು ಇಂತಹ ಸಮಾಜಮುಖಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ದೇಶದ ಭವಿಷ್ಯಕ್ಕೆ ಶ್ರೇಷ್ಠ ಹೂಡಿಕೆ ಎಂದು ಅಭಿಪ್ರಾಯಪಟ್ಟರು.




ಬಿ.ವಿ.ಬಿ ಮಹಾವಿದ್ಯಾಲಯದ ಪ್ರಾಚಾರ್ಯರು ಡಾ. ಪಿ. ವಿಠಲ ರೆಡ್ಡಿ ಮಾತನಾಡಿ, "ರಕ್ತದಾನವು ಜೀವದಾನ. ಎನ್.ಸಿ.ಸಿ ಕಡೆಯಟ್ಸ್ ತೋರಿಸಿದ ಮಾನವೀಯ ಬದ್ಧತೆ ಎಲ್ಲ ವಿದ್ಯಾರ್ಥಿ ಗಳಿಗೆ ಪ್ರೇರಣೆಯಾಗಿದೆ" ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಘಟಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಶಿಬಿರದ ಯಶಸ್ಸಿಗೆ ಸಹಕಾರ ನೀಡಿದರು. ಕಾರ್ಯಕ್ರಮದಲ್ಲಿ ಅನೇಕರು ಸಕ್ರಿಯವಾಗಿ ಪಾಲ್ಗೊಂಡು, ಮಾನವೀಯ ಸೇವೆಯ ಪರಂಪರೆಯನ್ನು ಮುಂದುವರೆಸಿದರು.

# ನನ್ನ ಪ್ರೀತಿಯ ಗಣೇಶ...

ನಿನಗೆ ಭಕ್ತಿ ಪೂರ್ವಕ ನಮಸ್ಕಾರಗಳು. ಇನ್ನೇನು ಕೆಲವೇ ಗಂಟೆಗಳಲ್ಲಿ ನೀನು ಭೂಮಿಗೆ ಇಳಿದು ಬರುವೆ. ಈಗಾಗಲೇ ಮನೆ ಮನೆಗಳಲ್ಲಿ ನಿನ್ನ ಆಗಮನಕ್ಕಾಗಿ ಭರದ ಸಿದ್ಧತೆಗಳು ನಡೆದಿವೆ. ಪ್ರತಿಯೊಬ್ಬರುಗಳಲ್ಲಿ ಪ್ರತಿ ಗಲ್ಲಿಗಳಲ್ಲಿ ನಿನ್ನನ್ನು ಕೂರಿಸಲು ಬೇಕಾದ ಎಲ್ಲ ಸಿದ್ಧತೆಗಳು ನಡೆಯುತ್ತಿವೆ.

ನನ್ನ ಅಮ್ಮ ಮನೆಯ ಎಲ್ಲ ಕೋಣೆಗಳಲ್ಲಿನ ಜೇಡರ ಬಲೆಗಳನ್ನು ತೆಗೆದು ಚೊಕ್ಕಟಗೊಳಿಸಿದ್ದಾರೆ. ಅಪ್ಪ, ದೊಡ್ಡಪ್ಪಂದಿರ ಸಹಾಯದಿಂದ ನನ್ನ ಅಣ್ಣಂದಿರು ನಿನ್ನನ್ನು ಕೂರಿಸಲು ಅಲಂಕೃತ ಮಂಟಪವನ್ನು ತಯಾರಿಸುತ್ತಿದ್ದಾರೆ. ಹೊಲದಿಂದ ತಂದ ಮಾವಿನ ಮತ್ತು ಚಂಡು ಹೂವಿನ ತೋರಣಗಳನ್ನು ಮಾಡಿ ಮನೆಯ ತಲೆ ಬಾಗಿಲು ಮತ್ತಿತರ ಕಡೆಗಳಲ್ಲಿ ಕಟ್ಟುತ್ತಿದ್ದಾರೆ.

ಇನ್ನು ನನ್ನ ಅಜ್ಜಿಯಂತೂ ಅಮ್ಮ ದೊಡ್ಡಮ್ಮಂದಿರೊಂದಿಗೆ ಸೇರಿ ನಿನಗೆ ನೈವೇದ್ಯಕ್ಕಾಗಿ ಮೋದಕ, ಕರ್ಜಿಕಾಯಿ, ಚಕ್ಕುಲಿ, ಕೊಬ್ಬರಿ ಉಂಡೆ, ಪಂಚ ಕಜ್ಜಾಯಗಳನ್ನು ಮಾಡಿ ಎತ್ತಿಡುತ್ತಿದ್ದಾರೆ. ಮನೆಯಲ್ಲಿ ಪೂಜೆಗೆ ಸಕಲ ಸಿದ್ಧತೆಗಳು ನಡೆಯುತ್ತಿವೆ. ನಾವು ಮಕ್ಕಳೆಲ್ಲ ಚಿಕ್ಕಪ್ಪನೊಂದಿಗೆ ಅಂಗಡಿಗೆ ಹೋಗಿ ಸಣ್ಣಪುಟ್ಟ ಪಟಾಕಿಗಳು, ಭೂ ಚಕ್ರ, ಹೂ ಕುಂಡಗಳನ್ನು, ಹಾಗೂ ಮತಾಪುಗಳನ್ನು ತಂದು ಇಟ್ಟುಕೊಂಡಿದ್ದೇವೆ.

ಇನ್ನೇನು ಕೆಲವೇ ಗಂಟೆಗಳಲ್ಲಿ ನಿನ್ನನ್ನು ಮನೆಗೆ ಕರೆತಂದು ಪೂಜಿಸುತ್ತೇವೆ. ಮಂಗಳಾರತಿ ಮಾಡಿ ಭಕ್ತಿಯಿಂದ ಭಜಿಸಿ 21 ಬಾರಿ ಉಟಾ ಬೈಸ್ ಹಾಕಿ ನಮಸ್ಕರಿಸಿ ನಮ್ಮನ್ನು ಕೈ ಹಿಡಿದು ನಡೆಸು ಎಂದು ಬೇಡಿಕೊಳ್ಳುತ್ತೇವೆ. ನಿನಗೆ ನೈವೇದ್ಯ ಅರ್ಪಿಸಿ ನಾವು ಪ್ರಸಾದ ರೂಪದಲ್ಲಿ ಅದನ್ನು ಸೇವಿಸುತ್ತೇವೆ. ಎಲ್ಲವೂ ಸರಿಯೇ.

ಈಗಾಗಲೇ ನನ್ನೂರಿನ ಎಲ್ಲ ರಸ್ತೆಗಳಲ್ಲಿ ದೊಡ್ಡ ದೊಡ್ಡ ಪೆಂಡಾಲುಗಳನ್ನು ಹಾಕಿ ರಸ್ತೆಗಳನ್ನು ಬಂದು ಮಾಡಿ ದೊಡ್ಡ ದೊಡ್ಡ ಗಾತ್ರದ ನಿನ್ನ ಪ್ರತಿಕೃತಿಗಳನ್ನು ಲಾರಿಯಲ್ಲಿ ತರಿಸಿ ನಿಗದಿತ ಜಾಗದಲ್ಲಿ ಇಟ್ಟಿದ್ದಾರೆ. ನಾಳೆ ಡೋಲು ಬ್ಯಾಂಡು ಬಾಜಿಗಳೊಂದಿಗೆ ಕಿವಿಗಡಚಿಕ್ಕುವ

ಶಬ್ದವನ್ನು ಹೊರಡಿಸುವ ದೊಡ್ಡ ದೊಡ್ಡ ಧ್ವನಿವರ್ಧಕಗಳನ್ನು ಹಚ್ಚಿ ಜೋರಾಗಿ ಹಾಡು ಕುಣಿತಗಳ ಸಂಭ್ರಮದೊಂದಿಗೆ ನಿನ್ನನ್ನು ಕರೆ ತರುತ್ತಾರೆ. ಪೂಜಿಸುತ್ತಾರೆ. ಅಂದವಾಗಿ ಅಲಂಕರಿಸಿದ ಪೆಂಡಾಲುಗಳಲ್ಲಿ ನಿನ್ನನ್ನು ಕೂರಿಸಿ ಪೂಜಿಸುತ್ತಾರೆ. ಸಾವಿರಾರು ರೂಗಳ ಪಟಾಕಿಗಳನ್ನು ಸುಟ್ಟು ಸಂಭ್ರಮಿಸುತ್ತಾರೆ. ಪ್ರತಿದಿನ ಸಾಯಂಕಾಲ ಸಾವಿರಾರು ಜನ ನಿನ್ನ ದರ್ಶನ ಮಾಡುತ್ತಾರೆ ಅನ್ನ ಸಂತರ್ಪಣೆಗಳು ನಡೆಯುತ್ತವೆ. ವಿವಿಧ ಬಗೆಯ ಸ್ಪರ್ಧೆಗಳನ್ನು ನಡೆಸಿ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡುತ್ತಾರೆ. ಎಲ್ಲವೂ ಸರಿಯೇ.

ಆದರೆ ಧರ್ಮದ ಅದಿದೇವತೆಯಾದ ನಿನ್ನ ಮುಂದೆ ಐಟಂ ಹಾಡುಗಳನ್ನು ಹಚ್ಚಿ ಕುಡಿದು ಕುಣಿದು, ಇಸ್ಪೀಟ್ ಆಡುವುದು ತರವೆ?



ನಿನ್ನನ್ನು ಕೂರಿಸುವ ನಿಯಮವಿರದ ಹಲವಾರು ಮನೆಗ ಳಲ್ಲಿ ಅಡುಗೆ ತಯಾರಿಸಿ ನೈವೇದ್ಯ ಮಾಡಲು ಕೊಟ್ಟು ಕಳುಹಿಸುವ ಅಮ್ಮಂದಿ ರು ತಮ್ಮ ಮಕ್ಕಳು ಗಣೇಶನನ್ನು ಕಾಯುತ್ತಿದ್ದಾರೆ ಎಂದೇ ಸಮಾಧಾನ ದಿಂದ ಇರುತ್ತಾರೆ ಆದರೆ ನಿನ್ನ ಪೆಂಡಾಲು ಗಳು .. ಗಣಪತಿಯುನ್ನು ಕಾಯುವ ನೆಪದಲ್ಲಿ ಪಡ್ಡೆ ಹೈಕಳ ಜೂಜಾಟ ಇಸ್ಪೀಟ್ಗಳಂತಹ ಪೋಲಿ ಕೆಲಸಗಳಿಗೆ ಎಳಸುವ ಅಡ್ಡ ಆಗದಿರಲಿ. ವಿದ್ಯಾ ಬುದ್ಧಿಗಳ ಅರಿದೇವತೆಯಾದ ನೀನು ಅಂತಹ ನಿನ್ನ ಮಕ್ಕಳ ಕನಸಿನಲ್ಲಿ ಬಂದು ಅವರ ಕಿವಿ ಹಿಂಡಿ ಬುದ್ದಿ ಕಲಿಸು ಎಂದು ಬೇಡಿಕೊ ಳ್ಳುತ್ತೇನೆ ಬಪ್ಪ.

ಇನ್ನು ಗಣೇಶನನ್ನು ಕಾಯುವ ನೆಪದಲ್ಲಿ ಗಣೇಶನನ್ನು ಕರೆತರುವ ಮತ್ತು ವಿಸರ್ಜಿಸುವ ದಿನಗಳಲ್ಲಿ ಪೈಪೋಟಿಗೆ ಬಿದ್ದವರಂತೆ ದೊಡ್ಡ ದೊಡ್ಡ ಧ್ವನಿವರ್ಧಕಗಳನ್ನು ತರಿಸಿ ಕಿವಿಗಡಚಿಕ್ಕುವಂತಹ ಸಂಗೀತವನ್ನು ಇಡೀ ಊರಿಗೆ ಕೇಳುವಂತೆ ಮೊಳಗಿಸುವವರಿಗೂ ಕೂಡ ನೀನೆ ಒಳ್ಳೆಯ ಬುದ್ದಿ ಕೊಡು. ಗಣೇಶ ಹಬ್ಬದ ಆ ಕೆಲವು ದಿನಗಳ ಮೊದಲು ಮತ್ತು ನಂತರ ನನ್ನ ಅಜ್ಜ ಅಜ್ಜಿಯಂತಹ ವಯಸ್ಸಾದವರು ದೈಹಿಕವಾಗಿ ಕಾಡುವ ವಯೋಸಹಜ ತೊಂದರೆಗಳ ಜೊತೆ ಜೊತೆಗೆ ಈ ದ್ವನಿವರ್ಧಕಗಳ ಶಬ್ದದಿಂದಾಗಿ ಕಿವಿ ತಮಟೆ ಒಡೆದು ಹೋಗುವಂತಹ ನೋವನ್ನು ಅವರು ಅನುಭವಿಸುತ್ತಾರೆ. ಅವರ ಎದೆ ಬಡಿತ ಹೆಚ್ಚಾಗಿ ಆರೋಗ್ಯದಲ್ಲಿ ಅಲ್ಲೋಲಕಲ್ಲೋಲ್ಲ ಉಂಟಾಗುವುದೂ ಇದೆ. ಎಷ್ಟೋ ಜನ ಹೃದಯ ಸ್ತಂಬನಕ್ಕೆ ಒಳಗಾಗಿದ್ದೂ ಉಂಟು. ಅಂತಹವರು ನಿನ್ನ ಹಬ್ಬ ಬಂದರೆ ನಿನ್ನ ಮೇಲೆ ಅದೆಷ್ಟೇ ಭಕ್ತಿ,ಪ್ರೀತಿ ಇದ್ದರೂ ಕೂಡ , ಯಾಕಾದರೂ ಗಣೇಶನ ಹಬ್ಬ ಬಂತು ಎಂದು ನಿನ್ನ ಭಕ್ತರನ್ನು ಶಪಿಸುವುದೂ ಉಂಟು. ಪ್ಲೀಸ್ ನಿನ್ನ ಹುಡುಗು ಬುದ್ದಿಯ ಭಕ್ತರಿಗೆ ನೀನೆ ಬುದ್ಧಿ ಹೇಳು.

ಇನ್ನು ಪೈಪೋಟಿಯಿಂದ ಸಾವಿರಾರು ಲಕ್ಷಾಂತರ ರೂಗಳನ್ನು ಖರ್ಚು ಮಾಡಿ ತಂದ ಪಟಾಕಿಗಳನ್ನು ಅದರಲ್ಲೂ ದೊಡ್ಡ ದೊಡ್ಡ ಶಬ್ದ ಮಾಡುತ್ತಾ ಸಿಡಿಯುವ ಬಾಂಬುಗಳ ಶಬ್ದಕ್ಕೆ ಮನೆಯಲ್ಲಿರುವ ನಾಯಿ, ಬೆಕ್ಕುಗಳು, ದನ ಕರುಗಳು ಬೆದರಿ ನಡುಗುತ್ತವೆ ಒಂದೇ ಸಮನೆ ಕೂಗಿ ತಮ್ಮ ಅಳಲನ್ನು ಹೇಳಿಕೊಳ್ಳುತ್ತವೆ. ನಮ್ಮ ಮನೆಯ ಪುಟ್ಟ ನಾಯಿಮರಿಯನ್ನು ಅವುಚಿ ಹಿಡಿದುಕೊಂಡರೂ ಅದರ ನಡುಕ ನಿಲ್ಲುವುದಿಲ್ಲ. ಪಾಪದ ಮೂಕ ಪ್ರಾಣಿಗಳು ಹೇಳಿಕೊಳ್ಳಲೂ ಆಗದೆ ಬಿಡಲೂ ಆಗದೆ ನರಕ ಯಾತನೆಯನ್ನು ಅನುಭವಿಸುತ್ತವೆ. ಇನ್ನು ಬೀದಿಯಲ್ಲಿ ಓಡಾಡುವ ಪ್ರಾಣಿಗಳ ಪಾಡೇನು? ಹಬ್ಬದ ಆ ಸಮಯದಲ್ಲಿ ಅದೆಷ್ಟೋ ಪ್ರಾಣಿಗಳು ಸತ್ತು ಬಿದ್ದಿರಲು ಕಾರಣ ನಿನ್ನ ಭಕ್ತರು ಬಾಡಿಗೆಗೆ ತಂದು ಹಚ್ಚಿರುವ ಧ್ವನಿ ವರ್ಧಕಗಳು ಎಂದರೆ ನಿನಗೆ ಬೇಸರವಿಲ್ಲವಷ್ಟೇ..ನೀನು ಕೂಡ ಆ ಪಶು ಪ್ರಾಣಿಗಳಿಂದ ನಿನ್ನ ದೇಹದ ಮುಖ್ಯ ಭಾಗವನ್ನು ಎರವಲು ಪಡೆದವನು. ನಿನಗೆ ಅವುಗಳ ಸಂಕಟ ನೋವು ಅರಿವಾಗುತ್ತದೆ ಅಲ್ವೇ ?

ಮತ್ತೆ ನೀನ್ಯಾಕೆ ಅವರ ಕಿವಿಹಿಂಡಿ ಅವರಿಗೆ ಬುದ್ಧಿ ಹೇಳುವುದಿಲ್ಲ.ಪ್ಲೀಸ್ ಗಣಪ್ಪ...ನಿನಗೆ ಕೈಮುಗಿದು ಬೇಡಿಕೊಳ್ಳುತ್ತೇನೆ ಅವರಿಗೆ ಬುದ್ಧಿ ಹೇಳಿ ವಯಸ್ಸಾದವರ, ರೋಗಿಗಳ, ಮೂಕ ಪ್ರಾಣಿಗಳ ನೋವನ್ನು ಅವರಿಗೆ ತಿಳಿಸಿ ಹೇಳು.

ಹಾಂ! ಮತ್ತೊಂದು ವಿಷಯ ಹೇಳುವುದನ್ನು ಮರೆತುಬಿಡುತ್ತಿದ್ದೆ. ಪಟಾಕಿ ಹಚ್ಚುವಾಗ ಕೈಕಾಲು, ಮುಖದ ಭಾಗಗಳನ್ನು ಸುಟ್ಟುಕೊಂಡವರು, ಕಣ್ಣು ಕಿವಿಗಳನ್ನು ಕಳೆದುಕೊಂಡವರು ಇದ್ದಾರೆ. ಇಂತಹ ಅವಘಡಗಳು ಸಂಭವಿಸದಂತೆ ಜಾಗರೂಕತೆಯಿಂದ ಹಬ್ಬವನ್ನು ಸಂಭ್ರಮಿಸಲು ನಿನ್ನ ಭಕ್ತರಿಗೆ ನೀನು ಹೇಳಲೇಬೇಕು ನೋಡು.... ಇದು ನಿನ್ನ ಕರ್ತವ್ಯ ಅಲ್ವೇ?

ನನ್ನ ಅಪ್ಪ ಹೇಳ್ತಿದ್ರು... ಸ್ವತಂತ್ರ ಪೂರ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಜನರಿಗೆ ತಮ್ಮ ಚಟುವಟಿಕೆಗಳನ್ನು ನಡೆಸಲು, ಸಂದೇಶಗಳನ್ನು ರವಾನಿಸಲು, ಜನರಲ್ಲಿ ದೇಶಪ್ರೇಮದ ಕಿಡಿಯನ್ನು ಹಚ್ಚಲು ಮನೆ ಮನೆಗಳಲ್ಲಿ ಆಚರಿಸುತ್ತಿದ್ದ ಗಣೇಶೋತ್ಸವವನ್ನು ಗಲ್ಲಿ ಗಲ್ಲಿಗಳಿಗೆ ಕರೆತಂದು ಅರ್ಥಪೂರ್ಣವಾಗಿ ಆಚರಿಸಲು ಆರಂಭಿಸಿದರಂತೆ. ಧಾರ್ಮಿಕ ಪ್ರಜ್ಞೆಯನ್ನು ಮೂಡಿಸುವ ಗಣೇಶ ದೇವರನ್ನು ಸಾಂಸ್ಕೃತಿಕ ಪ್ರಜ್ಞೆಯ ಹರಿಕಾರನನ್ನಾಗಿಸಿದ್ದು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಬಾಲಗಂಗಾಧರ ತಿಲಕರು. ಒಂದು ಧಾರ್ಮಿಕ ಧರ್ಮಾಚರಣೆಗೆ ಅರ್ಥಪೂರ್ಣ ಚೌಕಟ್ಟನ್ನು ಕೂರಿಸಿಕೊಟ್ಟ ಅವರ ಪ್ರಯತ್ನಗಳು ಇಂದು ಆಡಂಬರದ, ಮೌಢ್ಯದ, ಅನವಶ್ಯಕ ಅಟಾಟೋಪಗಳ ಕಾರ್ಯಕ್ರಮವಾಗಿ ಬದಲಾಗಬಾರದು ಅಲ್ವೇ?

ಶ್ರಾವಣ ಮಾಸದಲ್ಲಿ ತವರಿನ ಉಡಿಯನ್ನು, ಪ್ರೀತಿಯನ್ನು ತನ್ನ ಮಡಿಲಲ್ಲಿ ತುಂಬಿಕೊಂಡು ಹೋಗಲು ತವರಿಗೆ ಬಂದಿದ್ದ ನಿನ್ನಮ್ಮ ಗೌರಿ ದೇವಿಯನ್ನು ಕರೆದೊಯ್ಯಲು ಬಂದ ನೀನು ನಿನ್ನನ್ನು ಮರೆಸುವ ಭಕ್ತರ ಭಕ್ತಿ ಮತ್ತು ಪ್ರೀತಿಯಲ್ಲಿ ಮುಳುಗಿ ಏಳುತ್ತೀಯಷ್ಟೇ. ನಿನ್ನೆಲ್ಲ ಭಕ್ತರಿಗೆ ಜ್ಞಾನ, ಸದ್ಬುದ್ಧಿ ಮತ್ತು ವಿವೇಕವನ್ನು ನೀಡು.

"ವಿವೇಕವೇ ಇಲ್ಲದ ಜ್ಞಾನ ಅಪಾಯಕ್ಕೆ ದಾರಿ" ಮಾಡಿಕೊಡುತ್ತದೆ... ಅಂತೆಯೇ ನಿನ್ನ ಭಕ್ತರು ನಿನ್ನನ್ನು ಪ್ರತಿಷ್ಠಾಪಿಸುವ ಮತ್ತು ಮರಳಿ ವಿಸರ್ಜಿಸುವ ಸಮಯದಲ್ಲಿ ಅಜ್ಞಾನಿಗಳಂತೆ ಕುಡಿದು ಕುಣಿದು ಕುಪ್ಪಳಿಸಿ ಕೆಲವೊಮ್ಮೆ ಪೊಲೀಸರ ಲಾಠಿ ಏಟು ತಿಂದು ಮನೆಗೆ ಮರಳುವುದು ಬೇಡ. ನಿನ್ನ ಭಕ್ತಿಯ ಶಕ್ತಿಯನ್ನು ಕೋರುವ ಗೀತ ಗಾಯನಗಳು ಎಲ್ಲೆಡೆ ಮೊಳಗಲಿ.

ಸಾಮಾಜಿಕ ಶಾಂತಿ ಸೌಹಾರ್ದತೆ ಮತ್ತು ಸಾಮರಸ್ಯಗಳನ್ನು ಬಿಂಬಿಸುವ ಜೊತೆ ಜೊತೆಗೆ ನಾಡಿನ ಎಲ್ಲ ಜನರ ನೆಮ್ಮದಿ ಮತ್ತು ಸಂತೋಷಗಳಿಗೆ ನಿನ್ನ ಹಬ್ಬ ಕಾರಣವಾಗಲಿ..... ಏನಂತೀಯಾ?

ನಿನಗೂ ಈ ಆಡಂಬರಗಳು ಬೇಕಿಲ್ಲ ಎಂಬುದು ನಮಗೆ ಗೊತ್ತು. ಗರಿಕೆ ಹುಲ್ಲಿಗೆ ತೃಪ್ತನಾಗುವ ನೀನು ಯಾವ ಭೋಗ ಭಾಗ್ಯಗಳನ್ನು ಬಯಸುವುದಿಲ್ಲ ಎಂಬುದು ನಿಜ... ಆದರೂ ನಿನ್ನ ಹೆಸರಿನಲ್ಲಿ ಅಪಚಾರಗಳು ನಡೆಯುವುದು ಬೇಡ ಎಂಬುದು ನನ್ನ ಕಳಕಳಿ.

ಪತ್ರ ತುಂಬಾ ಉದ್ದವಾಯಿತು ಎಂದು ಓದದೆ ಇರಬೇಡ ಬಪ್ಪ. ನನ್ನ ಪುಟ್ಟ ಸ್ನೇಹಿತ ನೀನು, ನನ್ನ ಆರಾಧ್ಯ ದೈವವೂ ನೀನೇ. ನಿನ್ನ ಮೇಲಿನ ನನ್ನ ನಂಬಿಕೆಯನ್ನು ಮತ್ತಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ನಿನ್ನ ಭಕ್ತರಿಗೆ ನೀನೆ ಬುದ್ಧಿ ಹೇಳಿ ಮನವರಿಕೆ ಮಾಡಿಕೊಡು.

ಬೇಗ ಬಾ...ನಿನಗಾಗಿ ಕಾಯುತ್ತಿರುವೆವು.

ಇಂತಿ ನಿನ್ನ ಪ್ರೀತಿಯ ಭಕ್ತ

**– ವೀಣಾ ಹೇಮಂತ್ ಗೌಡ ಪಾಟೀಲ್**
**ಮುಂಡರಗಿ ಗದಗ್**

## ತಿಮರೋಡಿ ನಿವಾಸದಲ್ಲಿ ಎಸ್‌ಐಟಿಗೆ ಮಹತ್ವದ ಸಾಕ್ಷಿ ಪತ್ತೆ

**ಮಂಗಳೂರು,ಆ.26–**ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಷಡ್ಯಂತ್ರ ನಡೆದಿದೆ ಎಂಬ ಆರೋಪಗಳ ನಡುವೆಯೇ ಎಸ್‌ಐಟಿ ಅಧಿಕಾರಿಗಳು ತನಿಖೆಯನ್ನು ಚುರುಕುಗೊಳಿಸಿದ್ದು, ಮಹೇಶ್‌ಶೆಟ್ಟಿ ತಿಮರೋಡಿ ಮನೆ ಶೋಧ ನಡೆಸಿ ಮುಸುಕುಧಾರಿ ಚಿನ್ನಯ್ಯನ ಮೊಬೈಲ್ ಸೇರಿದಂತೆ ಕೆಲವು ಮಹತ್ವದ ಸಾಕ್ಷ್ಯಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಹೇಳಲಾಗಿದೆ.

ನ್ಯಾಯಾಲಯದಿಂದ ಸರ್ಚ್‌ವಾರೆಂಟ್ ಪಡೆದು ತಿಮರೋಡಿ ಮನೆಯ ಶೋಧಕಾರ್ಯವನ್ನು ಎಸ್‌ಐಟಿ ಅಧಿಕಾರಿಗಳು ನಡೆಸಿದ್ದು ಈ ಶೋಧಕಾರ್ಯ ನಡೆದ ಸಂದರ್ಭದಲ್ಲಿ ಮುಸುಕುಧಾರಿ ಚಿನ್ನಯ್ಯನ ಮೊಬೈಲ್ ಸೇರಿದಂತೆ ಕೆಲ ಮಹತ್ವದ ಸಾಕ್ಷ್ಯಗಳು ಎಸ್‌ಐಟಿಗೆ ಲಭ್ಯವಾಗಿವೆ ಎಂದು ತಿಳಿದು ಬಂದಿದೆ.

ಧರ್ಮಸ್ಥಳದಲ್ಲಿ ಈ ಹಿಂದೆ ನೂರಾರು ಶವಗಳನ್ನು ಹೂತು ಹಾಕಿದ್ದೇನೆ ಎಂದು ದೂರು ನೀಡಿದ್ದ ಮುಸುಕುಧಾರಿ ಚಿನ್ನಯ್ಯನ ವಿಚಾರಣೆ ವೇಳೆ ಆತ ನೀಡಿರುವ ಮಾಹಿತಿಗಳನ್ನು ಇಟ್ಟುಕೊಂಡು ಧರ್ಮಸ್ಥಳದ ಷಡ್ಯಂತ್ರದ ಹಿಂದಿರುವ ಸೂತ್ರಧಾರಿಗಳಿಗೆ ಬಲೆ ಬೀಸಿರುವ ಎಸ್‌ಐಟಿ ಅಧಿಕಾರಿಗಳು ಇಂದು ಬೆಳ್ಳಂಬೆಳಿಗ್ಗೆಯೇ ಮಹೇಶ್ ಶೆಟ್ಟಿ ತಿಮರೋಡಿ ಮನೆ ಮೇಲೆ ದಾಳಿ ನಡೆಸಿ ಶೋಧಕಾರ್ಯ ನಡೆಸಿದರು.

ಮುಸುಕುಧಾರಿ ಚಿನ್ನಯ್ಯ ಎಸ್‌ಐಟಿ ವಿಚಾರಣೆ ವೇಳೆಯಲ್ಲಿ ತನ್ನ ಮೊಬೈಲ್, ತಿಮರೋಡಿ ಮನೆಯಲ್ಲಿದೆ ನನ್ನ ಹತ್ತಿರ ಇಲ್ಲ ಎಂದು ಹೇಳಿದ, ಜತೆಗೆ ತಿಮರೋಡಿ ಮನೆಯ ಪಕ್ಕದಲ್ಲೇ ಇರುವ ಅವರ ಸಹೋದರ ಮೋಹನ್‌ಕುಮಾರ್ ಮನೆಯಲ್ಲಿ ಚಿನ್ನಯ್ಯನಿಗೆ ತಂಗಲು ಕೊಠಡಿ ನೀಡಲಾಗಿತ್ತು. ಈ ಎಲ್ಲ ಮಾಹಿತಿಗಳನ್ನು ಚಿನ್ನಯ್ಯನಿಂದ ಕಲೆ ಹಾಕಿದ ಎಸ್‌ಐಟಿ ಪೊಲೀಸರು ಇಂದು ಬೆಳಿಗ್ಗೆಯೇ ತಿಮರೋಡಿ ಮನೆಯ ಜತೆಗೆ ಆತನ ಸಹೋದರನ ಮನೆಯಲ್ಲೂ ಶೋಧಕಾರ್ಯ ನಡೆಸಿದರು.

ಎಸ್‌ಐಟಿ ಪೊಲೀಸರು ಶೋಧಕಾರ್ಯದ ಸಂದರ್ಭದಲ್ಲಿ ಚಿನ್ನಯ್ಯನ ಮೊಬೈಲ್, ತಿಮರೋಡಿ ಮನೆಯ ಸಿಸಿ ಟಿವಿ, ಹಾರ್ಡ್‌ಡಿಸ್ಕ್‌ಗಳನ್ನು ವಶಕ್ಕೆ ಪಡೆದಿದ್ದು, ತಿಮರೋಡಿ ಮನೆಗೆ ಯಾರೆಲ್ಲ ಭೇಟಿ ನೀಡಿದ್ದರು, ಚಿನ್ನಯ್ಯನ ಮನೆಯಲ್ಲಿ ತಂಗಿದ್ದನೆ ಎಂಬೆಲ್ಲ ವಿಷಯಗಳನ್ನು



ಪರಿಶೀಲಿಸುತ್ತಿದ್ದಾರೆ.

ಶವಗಳನ್ನು ಹೂತಿಟ್ಟಿದ್ದೆ ಎಂದು ಎಸ್‌ಐಟಿ ಪೊಲೀಸರಿಗೆ ಚಿನ್ನಯ್ಯ ಹೇಳಿದ ನಂತರ ಆತನನ್ನು ಎಸ್‌ಐಟಿ ಪೊಲೀಸರು ಪ್ರತಿದಿನವೂ ಧರ್ಮಸ್ಥಳದ ಕಾಡಿಗೆ ಕರೆದುಕೊಂಡು ಹೋಗಿ ಆತ ತೋರಿಸಿದ ಜಾಗದಲ್ಲಿ ಅಗೆದ ನಂತರ ಸಂಜೆ ಆತನನ್ನು ಬಿಟ್ಟು ಕಳುಹಿಸುತ್ತಿದ್ದರು. ಆಗ ಮುಸುಕುಧಾರಿ ಚಿನ್ನಯ್ಯ ತಿಮರೋಡಿಯ ಮನೆಯ ಪಕ್ಕದಲ್ಲಿರುವ ಸಹೋದರನ ಮನೆಯ ಕೊಠಡಿಗೆ ತೆರಳಿ ಅಲ್ಲಿಯೇ ತಂಗುತ್ತಿದ್ದ. ಜತೆಗೆ ಬಟ್ಟೆ ಇತರ ವಸ್ತುಗಳನ್ನುಅಲ್ಲಿಯೇ ಇಟ್ಟಿದ್ದೇನೆ ಎಂದು ಎಸ್‌ಐಟಿ ಪೊಲೀಸರಿಗೆ ತಿಳಿಸಿದ್ದ ಈ ಎಲ್ಲ ಮಾಹಿತಿ ಮೇರೆಗೆ ಎಸ್‌ಐಟಿ ಪೊಲೀಸರು ಇಂದು ತಿಮರೋಡಿ ಮನೆ ಮೇಲೆ ದಾಳಿ ಮಾಡಿ ಚಿನ್ನಯ್ಯ ತಂಗಿದ್ದ ಕೊಠಡಿಯ ಮಹಜರು ನಡೆಸಿದರು.

ಧರ್ಮಸ್ಥಳದಲ್ಲಿ ಉತ್ಖನನ ನಡೆಯುತ್ತಿದ್ದಾಗ ಬುರುಡೆ ಗ್ಯಾಂಗ್‌ನ ಎಲ್ಲ ಸದಸ್ಯರು ತಿಮರೋಡಿ ಮನೆಯಲ್ಲಿ ತಂಗಿದ್ದು, ಎಲ್ಲ ಯೋಜನೆ ಗಳು ಇಲ್ಲಿಯೇ ರೂಪಿತವಾಗಿದ್ದವು ಎಂಬ ಮಾತುಗಳು ಕೇಳಿ ಬಂದಿವೆ.

## ಗಣೇಶ ಹಬ್ಬಕ್ಕೆ ಬೆಲೆ ಏರಿಕೆ ನಡುವೆಯೂ ಭರ್ಜರಿ ವಹಿವಾಟು

**ಬೆಂಗಳೂರು, ಆ.26–** ಗಣೇಶನ ಹಬ್ಬಕ್ಕೆ ಸಿಲಿಕಾನ್ ಸಿಟಿ ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲೆಡೆ ಬರದ ಸಿದ್ಧತೆ ನಡೆದಿದೆ. ಆಗಲೇ ಗಣೇಶ ಮೂರ್ತಿ ಪ್ರತಿಷ್ಠಾಪಿಸಲು ಸಿದ್ಧತೆ ನಡೆದಿದ್ದು, ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ. ಈ ಬಾರಿಯೂ ಹೂವು, ದಿನಸಿ, ಹಣ್ಣು, ತರಕಾರಿ ಬೆಲೆ ಗಗನಕ್ಕೇರಿದ್ದು ಜನರು ಅಳೆದು ತೂಗಿ ಖರೀದಿ ಮಾಡುವಂತಾಗಿದೆ.

ಈಗಾಗಲೇ ಹಬ್ಬದ ಖರೀದಿ ನಡೆದಿದ್ದು, ಮಾರುಕಟ್ಟೆಯಲ್ಲಿಹಣ್ಣು, ತರಕಾರಿ ಬೆಲೆ ಏರಿಕೆ ಬಿಸಿ ಜನರಿಗೆ ತಟ್ಟಿದೆ. ಮಾರುಕಟ್ಟೆಯಲ್ಲಿ ಹಣ್ಣು, ತರಕಾರಿ, ದಿನಸಿ ಬೆಲೆ ಗಗನಕ್ಕೇರಿದೆ. ಬೆಂಗಳೂರಿನ ಪ್ರಮುಖ ಬೀದಿಗಳಲ್ಲಿ ಹೂವಿನ ವ್ಯಾಪಾರ ಭರ್ಜರಿಯಾಗಿ ನಡೆಯಿತು.

ನಗರದ ಬಹುತೇಕ ರಸ್ತೆ, ಜನಸಂದಣಿ ಸ್ಥಳಗಳಲ್ಲಿಹೂವು, ಹಣ್ಣಿನ ಅಂಗಡಿಗಳು ತಲೆ ಎತ್ತಿದ್ದವು. ಕಳೆದ 3 ದಿನಗಳಿಂದಲೂ ಹಬ್ಬದ ಖರೀದಿ ಜೋರಾಗಿ ನಡೆದಿದ್ದು, ಇಂದು ನಾಳೆ ಹಬ್ಬದ ಸಂಭ್ರಮ ಕಳೆಗಟ್ಟಲಿದೆ.

ಹಣ್ಣಿನ ಬೆಲೆ ನಿರೀಕ್ಷೆಯಂತೆ ಏರಿಕೆ ಕಂಡಿದೆ. ಶಿಮ್ಲಾಸೇಬು ಒಂದು ಕೆಜಿಗೆ 150–200 ರೂ., ಸೀತಾಫಲ 1 ಕೆಜಿಗೆ 120 ರೂ.ಗೆ ಏರಿಕೆಯಾಗಿದೆ. ಮೂಸಂಬಿ ಹಣ್ಣು ಕೆಜಿಗೆ 60 ರೂ., ದಾಳಿಂಬೆ 1 ಕೆಜಿ 200–250 ರೂ., ಏಲಕ್ಕಿ ಬಾಳೆ ಹಣ್ಣಿನ ಬೆಲೆ 120–150 ರೂ.ಗೆ ಏರಿಕೆಯಾಗಿದೆ. ಇನ್ನು ಸೀಬೆ ಹಣ್ಣಿನ ಬೆಲೆ 80–100 ರೂ.ವರೆಗೂ ಇದೆ. ಹೀಗಾಗಿ ಜನರು ಹಿಂದು ಮುಂದು ನೋಡಿ ಖರೀದಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಮಾರುಕಟ್ಟೆಯಲ್ಲಿ ಹೂವಿನ ಬೆಲೆಯೂ ಏರಿಕೆಯಾಗಿದ್ದು, 1 ಕೆಜಿ ಸೇವಂತಿ ಬೆಲೆ 400– 500 ರೂ.ವರೆಗೂ ಇದೆ. ಗುಲಾಬಿ 300–400 ರೂ., ಮಲ್ಲಿಗೆ ಹೂವು 1 ಕೆಜಿಗೆ 800 –100 ರೂ. ಇದೆ. ಶ್ರಾವಣ ಮಾಸದಲ್ಲೂ ಇದೇ ಬೆಲೆ ಇತ್ತು, ಈಗ ಗಣೇಶನ ಹಬ್ಬಕ್ಕೂ ಹೂವಿನ ಬೆಲೆ ಏರಿಕೆ ಆಗಿದೆ.

ಇನ್ನೊಂದೆಡೆ ಗಣೇಶೋತ್ಸವವನ್ನು ಭರ್ಜರಿಯಾಗಿ ಆಚರಿಸಲು ಸಿದ್ಧತೆಗಳು ನಡೆದಿವೆ. ಕೆಲವೆಡೆ ಉಚಿತವಾಗಿ ಗಣೇಶನ ವಿತರಣೆಯೂ ನಡೆದಿದೆ. ಕೆಲವು ಸಮಾಜ ಸೇವಕರು ಆಹ್ವಾನ ನೀಡಲು ಬಂದವರಿಗೆ ಒಳ್ಳೆ ದೇಣಿಗೆ ಕೊಟ್ಟು ಕಳಿಸುತ್ತಿದ್ದಾರೆ. ಕೆಲವು ರಾಜಕಾರಣಿಗಳು ಮಾತ್ರ ಹಣ ಮತ್ತು ಗಣೇಶನಗಳನ್ನು ವಿತರಿಸುವ ಕೆಲಸ ನಡೆದಿದೆ.

ನಾನಾ ಕಡೆ ನಾನಾ ಕಲ್ಪನೆಯಲ್ಲಿ ಗಣೇಶ ಮೂರ್ತಿಗಳನ್ನು ಕೂರಿಸಲು ಪೆಂಡಾಲ್‌ಗಳನ್ನು ಹಾಕಲಾಗಿದ್ದು, ಬೃಹತ್ ಗಣೇಶ ಮೂರ್ತಿಗಳ ಆರ್ಭಟವೂ ಜೋರಾಗಿದೆ.



ಪಿಒಪಿ ಗಣೇಶನ ಮೂರ್ತಿಗಳ ಮಾರಾಟಕ್ಕೆ ನಿಷೇಧ ಹೇರಲಾಗಿದೆ. ಆದರೆ ನೆರೆ ರಾಜ್ಯಗಳಿಂದ ಹೆಚ್ಚಾಗಿ ಪಿಒಪಿ ಗಣೇಶನಗಳನ್ನು ತಂದಿದ್ದಾರೆ. ಹೀಗಾಗಿ ನಗರದಲ್ಲಿ ಮಾರಾಟಕ್ಕಿಟ್ಟಿದ್ದ ಗಣೇಶ ಮೂರ್ತಿಗಳು ಸರಿಯಾಗಿ ಮಾರಾಟವಾಗಿಲ್ಲ. ಮೊದಲೇ ಮುಂಗಡ ಹಣ ಕೊಟ್ಟು ಕಾಯ್ದಿರಿಸಿದ್ದವರು ಸಹ ಪಿಒಪಿ ಗಣೇಶನ ಮೂರ್ತಿಗಳಗಳನ್ನು ಖರೀದಿಸಿದ್ದಾರೆ ಎನ್ನುತ್ತಾರೆ ವ್ಯಾಪಾರಿಗಳು.

ಬಹುತೇಕ ಮಂದಿ 3 ದಿನ ಅಥವಾ 5 ದಿನಗಳವರೆಗೂ ಗಣೇಶನನ್ನು ಪ್ರತಿಷ್ಠಾಪನೆ ಮಾಡಿ ವಿಸರ್ಜನೆ ಮಾಡುತ್ತಾರೆ. ಕೆಲವು ದೊಡ್ಡ ಮಟ್ಟದ ಸಮಿತಿಗಳು ವಿಶೇಷ ಅನುಮತಿ ಪಡೆದು 12 ದಿನದವರೆಗೂ ಗಣೇಶೋತ್ಸವ ನಡೆಸುತ್ತಾರೆ. ಆದರೆ ಈ ಬಾರಿ ಗಣೇಶೋತ್ಸವಕ್ಕೆ ನಾನಾ ನಿಯಮ ಮತ್ತು ನಿರ್ಬಂಧಗಳನ್ನು ವಿಧಿಸಿದ್ದು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸಲಾಗಿದೆ.

ಬೆಂಗಳೂರು ಸೇರಿದಂತೆ ಆಯಾ ಜಿಲ್ಲೆಯಲ್ಲಿ ಯಾವುದೇ ಅಹಿತಕರ ನಡೆಯದಂತೆ ಜಿಲ್ಲಾ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದೆ. ಗಣೇಶ ವಿಗ್ರಹ ಪ್ರತಿಷ್ಠಾಪನೆಗೆ ನಿಗದಿಪಡಿಸಿರುವ ಎಲ್ಲರೀತಿಯ ಅನುಮತಿ ಪಡೆದು, ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಗಣೇಶ ವಿಗ್ರಹಗಳ ಕುರಿತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಹೊರಡಿಸಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

ಗಣೇಶ ವಿಗ್ರಹ ಪ್ರತಿಷ್ಠಾಪಿಸಿದ ಸ್ಥಳಗಳಲ್ಲಿ ಯಾವುದೇ ಆಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳಲು ದಿನದ 24 ಗಂಟೆಗಳ ಕಾಲ ಇಬ್ಬರು ಜವಾಬ್ದಾರಿಯುತ ಕಾರ್ಯಕರ್ತರು ಇರುವಂತೆ ನೋಡಿಕೊಳ್ಳಬೇಕು, ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು ಎಂಬ ಸೂಚನೆ ಇದೆ.

ಯುವ ಮಾರ್ಗ



## ಸಮಾಜ ಕಲ್ಯಾಣ ಇಲಾಖೆಯಿಂದ ನಾಗಪುರದ ದೀಕ್ಷಾಭೂಮಿ ಯಾತ್ರೆಗೆ ತೆರಳುವ ಅರ್ಜಿ ಆಹ್ವಾನ

**ರಾಯಚೂರು,ಆ.26–**ಸಮಾಜ ಕಲ್ಯಾಣ ಇಲಾಖೆಯಿಂದ 2025–26ನೇ ಸಾಲಿಗೆ ಡಾ.ಬಿ.ಆರ್.ಅಂಬೇಡ್ಕರ ಅನುಯಾಯಿಗಳನ್ನು ಮಹಾರಾಷ್ಟ್ರದ ನಾಗಪುರದ ದೀಕ್ಷಾಭೂಮಿ ಯಾತ್ರೆಗೆ ತೆರಳುವ ಯಾತ್ರಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅಕ್ಟೋಬರ್–2025ರ 2ನೇ ತಾರೀಖಿನೊಂದು ನಡಯಲಿರುವ ಪ್ರವರ್ತನಾ ದಿನಕ್ಕೆ ನಾಗಪುರ ದೀಕ್ಷಾ ಭೂಮಿಗೆ ಕಳುಹಿಸುವ ಸಂಬಂಧ ಜಿಲ್ಲಾವಾರು ರಾಜ್ಯದ ಒಟ್ಟು 7,700 ಅರ್ಹ ಯಾತ್ರಾರ್ಥಿಗಳನ್ನು ಆಯ್ಕೆ ಮಾಡಿ ಕೆ.ಎಸ್.ಆರ್.ಟಿ.ಸಿ, ಇತರೆ ಸಾರಿಗೆ ಬಸ್ ಹಾಗೂ ರೈಲಿನ ಮೂಲಕ ಕಳುಹಿಸಲು ಆದೇಶಿಸಲಾಗಿದ್ದು, ಸೆಪ್ಟೆಂಬರ್ 30ರಿಂದ ಅಕ್ಟೋಬರ್ 04ರವರೆಗೆ ರಾಯಚೂರು ಜಿಲ್ಲೆಯಿಂದ ಪ್ರಯಾಣಿಸಲು ಹಾಗೂ ಹಿಂದಿರುಗಿ ಬರುವ ಸಂಬಂಧ ಬಸ್ ಮತ್ತು ರೈಲಿನ ಮೂಲಕ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ಆಸಕ್ತ ಯಾತ್ರಾರ್ಥಿಗಳು ಇಲಾಖೆಯ ವೆಬ್‌ಸೈಟ್ ವಿಳಾಸ: https://swd.karnataka.gov.in/website ನಲ್ಲಿ ಸೆಪ್ಟೆಂಬರ್ 9ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ರಾಯಚೂರಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಶುಲ್ಕ ಪರಿಷ್ಕರಣೆ

**ರಾಯಚೂರು,ಆ.26–**ಇಲ್ಲಿನ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯಿಂದ 2025–26ನೇ ಸಾಲಿಗೆ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ವರ್ಷ ಡಿಪ್ಲೋಮಾ ಕೋರ್ಸುಗಳು ಹಾಗೂ ಲ್ಯಾಟರಲ್ ಎಂಟ್ರಿ ದ್ವಿತೀಯ ವರ್ಷಕ್ಕೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಬೋಧನಾ ಶುಲ್ಕ ಹಾಗೂ ಡಿಪ್ಲೋಮಾ ಪ್ರವೇಶ ಅರ್ಜಿ ಶುಲ್ಕವನ್ನು ಪರಿಷ್ಕರಿಸಲಾಗಿದೆ.

ಪ್ರಸ್ತುತ 2940 ರೂ.ಗಳು ಬೋಧನಾ ಶುಲ್ಕವಾಗಿದ್ದು, 3250ರೂ.ಗಳಿಗೆ ಬೋಧನಾ ಶುಲ್ಕವನ್ನು ಪರಿಷ್ಕೃತ ಮಾಡಲಾಗಿದೆ.

ಸಾಮಾನ್ಯ ವರ್ಗ/2ಎ/2ಬಿ/3ಎ/3ಬಿ ವರ್ಗಗಳಿಗೆ ಪ್ರಸ್ತತ 100ರೂ.ಗಳ ಪ್ರವೇಶದ ಅರ್ಜಿ ಶುಲ್ಕವಿದ್ದು, 200ರೂ.ಗಳಿಗೆ ಪರಿಷ್ಕೃತ ಮಾಡಲಾಗಿದೆ. ಪ.ಜಾ/ಪ.ಪಂ/ಪ್ರವರ್ಗ–1 ವರ್ಗಗಳಿಗೆ ಪ್ರಸ್ತತ 50 ರೂ.ಗಳ ಪ್ರವೇಶದ ಅರ್ಜಿ ಶುಲ್ಕವಿದ್ದು, 100ರೂ.ಗಳಿಗೆ ಪರಿಷ್ಕೃತ ಮಾಡಲಾಗಿದೆ ಎಂದು ರಾಯಚೂರಿನ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಸೆ.7ರವರೆಗೆ ಆಧಾರ್ ಸೀಡಿಂಗ್ ಅಭಿಯಾನ

**ರಾಯಚೂರು,ಆ.26–**ಇಲ್ಲಿನ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲು ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆಯಾಗದೇ ಬಾಕಿ ಇರುವ ಅರ್ಜಿಗಳಿಗೆ ಆಧಾರ್ ಸೀಡಿಂಗ್ ಮಾಡುವ ಕಾರ್ಯವನ್ನು ಪೂರ್ಣಗೊಳಿಸಲು ಆಧಾರ್ ಸೀಡಿಂಗ್ ಅಭಿಯಾನವನ್ನು ಸೆಪ್ಟೆಂಬರ್ 7ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಲಾಗಿದೆ.

ಆಧಾರ್ ಸೀಡಿಂಗ್ ಆಗದೇ ಇರುವ ಕೆಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರಿಗೆ ತಾಂತ್ರಿಕ ಅಡೆತಡೆ ಉಂಟಾಗಿರುವ ಹಿನ್ನಲೆಯಲ್ಲಿ ಎಲ್ಲಾ ಅರ್ಹ ವಿದ್ಯಾರ್ಥಿಗಳು ಆಧಾರ್ ಸೀಡಿಂಗ್ ಮಾಡಿಸಿಕೊಳ್ಳುವಂತಾಗಿಸಲು ವಿಶೇಷ ಆಧಾರ್ ಸೀಡಿಂಗ್ ಅಭಿಯಾನವನ್ನು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಹಮ್ಮಿಕೊಳ್ಳಲಾಗಿದೆ.

ಸೂಚನೆಗಳು: ಆಧಾರ್ ಸೀಡಿಂಗ್ ಆಗದೇ ಇರುವ ವಿದ್ಯಾರ್ಥಿಗಳ ಪಟ್ಟಿಯನ್ನು ತಾಲೂಕು ಎಸ್.ಎಸ್.ಪಿ. ಲಾಗಿನ್‌ನಲ್ಲಿ ಪಡೆದು ಆಯಾ ಶಾಲಾ ಹಾಗೂ ಕಾಲೇಜುಗಳ ಪ್ರಕಾರ ವಿಂಗಡಿಸಿ ಪಟ್ಟಿ ಸಿದ್ಧಪಡಿಸಿಕೊಳ್ಳಬೇಕು. ವ್ಯಾಪಕ ಜಾಗೃತಿ ಮೂಡಿಸುವಿಕೆಯ ಸಲುವಾಗಿ ಹಾಸ್ಟೇಲ್ ವಾರ್ಡನ್ ಹಾಗೂ ಇಲಾಖೆಯ ಸಿಬ್ಬಂದಿಯ ಸಹಕಾರದೊಂದಿಗೆ ಆಧಾರ್ ಸೀಡಿಂಗ್ ಆಗದೇ ಇರುವ ವಿದ್ಯಾರ್ಥಿಗಳ ಶಾಲಾ ಹಾಗೂ ಕಾಲೇಜುಗಳಲ್ಲಿ ಜಾಗೃತಿ ಅಭಿಯಾನ ಹಮ್ಮಿಕೊಳ್ಳುಬೇಕು. ಜಿಲ್ಲೆ ಹಾಗೂ ತಾಲೂಕುನಲ್ಲಿ ಆಧಾರ್ ಸೀಡಿಂಗ್ ಆಗದೇ ಇರುವ ಎಲ್ಲಾ ಅರ್ಜಿಗಳನ್ನು ತಿತಿತಿ.ಟಿಠಿಥಿ.ಠಿಡಿಗಿ.ಟಿ ನ ತಂತ್ರಾಂಶದ ಮೂಲಕ ಖಚಿತಪಡಿಸಿಕೊಂಡು ಸೀಡಿಂಗ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕೆಂದು ಸಂಬಂಧಿಸಿದ ಶಾಲಾ ಹಾಗೂ ಕಾಲೇಜುಗಳ ಮುಖ್ಯಸ್ಥರಿಗೆ ಹಾಗೂ ಜಿಲ್ಲೆಯ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಿಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಚೇರಿಯ ದೂರವಾಣಿ ಸಂಖ್ಯೆ: 08532–220045, 9535828236 ಅಥವಾ ತಾಲೂಕಾ ಕಚೇರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪೊಲೀಸ್ ಆಯುಕ್ತಾಲಯ ಪಡೆ ಸೇರಿದ ಐದು ಶ್ವಾನಗಳು

**ಕಲಬುರಗಿ,ಆ.26–** ನಗರ ಪೊಲೀಸ ಆಯುಕ್ತಾಲಯ ಶ್ವಾನ ಪಡೆಗೆ ಐದು ಶ್ವಾನಗಳು ಸೇರ್ಪಡೆಯಾಗಿದ್ದು ಸೋಮವಾರ ಅವುಗಳ ನಾಮಕರಣ ಮಾಡಲಾಯಿತು.

ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್ ಡಿ ಮತ್ತು ಹಿರಿಯ ಅಧಿಕಾರಿಗಳು ಈ ಶ್ವಾನಗಳಿಗೆ ರೀಟಾ, ರೂಬಿ, ಸ್ಪಾರ್ಕಿ,ಸ್ಫೂರ್ತಿ ಮತ್ತು ಲಿಯೊ ಎಂದು ಹೆಸರಿಟ್ಟರು.

# ಪತ್ರಕರ್ತರ ನಿಂದಿಸಿದ ಪ್ರಾಚಾರ್ಯರ ವಿರುದ್ಧ ಕ್ರಮವಹಿಸಿ



**ಯುವ ಮಾರ್ಗ ಸುದ್ದಿ**

**ದೇವದುರ್ಗ,ಆ.26–**ತಾಲೂಕಿನ ಕೊತ್ತದೊಡ್ಡಿ ಏಕಲವ್ಯ ಮಾದರಿ ವಸತಿ ಶಾಲೆಯ ವಿದ್ಯಾರ್ಥಿಗಳಲ್ಲಿ ಅನಾರೋಗ್ಯ ಕಾಣಿಸಿಕೊಂಡ ಹಿನ್ನೆಲೆ ವರದಿ ಮಾಡಲು ತೆರಳಿದ್ದ ಪತ್ರಕರ್ತರಿಗೆ ಪ್ರಾಚಾರ್ಯ ಸುರೇಶ ವರ್ಮಾ ಅವಾಚ್ಯ ಶಬ್ಧಗಳಿಂದ ನಿಂದನೆ ಮಾಡಿದ್ದನ್ನು ಖಂಡಿಸಿ ಮಿನಿ ವಿಧಾನಸೌಧ ಮುಂದೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಸೋಮವಾರ ಪ್ರತಿಭಟನೆ ನಡೆಸಿತು.

ಹಿರಿಯ ಪತ್ರಕರ್ತ ಗಿರಿಯಪ್ಪ ಪೂಜಾರಿ ಮಾತನಾಡಿ, ಕೊತ್ತದೊಡ್ಡಿ ವಸತಿ ಶಾಲೆಯಲ್ಲಿ ಅನಾರೋಗ್ಯಕ್ಕೆ ತುತ್ತಾದ ವಿದ್ಯಾರ್ಥಿಗಳು ಅರಕೇರಾದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ತಪಾಸಣೆ ಮಾಡಿಸಿಕೊಳ್ಳುವ ಸಂದರ್ಭದಲ್ಲಿ ಪತ್ರಕರ್ತರು ಪೋಟೊ ತೆಗೆದುಕೊಳ್ಳುವಾಗ ಪ್ರಾಚಾರ್ಯ ಸುರೇಶ ವರ್ಮಾ ಅನುಚಿತವಾಗಿ ವರ್ತಿಸಿದರು. ಲೋಫರ್ಸ್, ಅಯೋಗ್ಯರು, ಇಡಿಯಟ್ಸ್ ಎನ್ನುವ ಪದಪ್ರಯೋಗ ಮಾಡಿದ್ದಾರೆ. ಇದರಿಂದ ಪತ್ರಕರ್ತರು ಸಮಾಜದಲ್ಲಿ ಸ್ವತಂತ್ರವಾಗಿ ವರದಿಗಾರಿಕೆ ಮಾಡಲು ಆಗಲ್ಲ. ಇದರಿಂದ ಪತ್ರಕರ್ತರು ಮಾನಸಿಕವಾಗಿ ನೊಂದಿದ್ದಾರೆ. ಇಂಥವರ ವಿರುದ್ಧ ಕಠಿಣ ಕ್ರಮವಾಗಬೇಕು ಎಂದು ಒತ್ತಾಯಿಸಿದರು.

ಕೂಡಲೇ ಪತ್ರಕರ್ತರೊಂದಿಗೆ ಅನುಚಿತವಾಗಿ ವರ್ತಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ ಪ್ರಾಚಾರ್ಯ ಸುರೇಶ ವರ್ಮಾರನ್ನು ಅಮಾನತು ಮಾಡಬೇಕು. ಮುಂದೆ ಇಂಥ ಘಟನೆಗಳು ಮರುಕಳಿಸದಂತೆ ಅಧಿಕಾರಿಗಳಿಗೆ ಸರ್ಕಾರ ಸೂಚನೆ ನೀಡಬೇಕು ಎಂದು ಒತ್ತಾಯಿಸಿದರು.

ತಾಲೂಕು ಅಧ್ಯಕ್ಷ ಬಾಬುಅಲಿ ಕರಿಗುಡ್ಡ, ಜಿಲ್ಲಾ ಸಮಿತಿ ಸದಸ್ಯರು ಸೂಗೂರೇಶ ಗುಡಿ, ಪತ್ರಕರ್ತರಾದ ನರಸಿಂಗ್‌ರಾವ್ ಸರ್ಕಿಲ್, ಬಸನಗೌಡ ದೇಸಾಯಿ, ಕಾರ್ಯದರ್ಶಿ ನಾಗರಾಜ ಸುಟ್ಟಿ, ಮೈನುದ್ದೀನ್ ಕಾಟಮಳ್ಳಿ, ಚಂದ್ರಶೇಖರ ನಾಡಗೌಡ, ಸುರೇಶಗೌಡ, ಮಹಾಂತೇಶ ಹಿರೇಮಠ, ಆನಂದ ಗುಡಿ, ಗುರುಸ್ವಾಮಿ, ಮಾರ್ಕಂಡಯ್ಯ, ಬೆಳ್ಳೆಪ್ಪ ಬಲ್ಲಿದವ್, ರವಿಕುಮಾರ್ ಅಳ್ಳುಂಡಿ, ನಾಗರಾಜ ಮನ್ನಾಪುರ, ಶರಣು ಪಲ್ಲೇದ್, ಸಚ್ಚಿದಾನಂದ ನಾಯಕ, ಅಮರೇಶ ನಾಯಕ, ಅಜ್ಮೀರ್, ಇತರರಿದ್ದರು

# ಪತ್ರಕರ್ತರಿಗೆ ಅವಾಚ್ಯ ಶಬ್ದಗಳಿಂದ ನಿಂದನೆ; ಕೊತ್ತದೊಡ್ಡಿ ಏಕಲವ್ಯ ವಸತಿ ಶಾಲೆಯ ಪ್ರಿನ್ಸಿಪಲ್ ಮೇಲೆ ಕ್ರಮಕ್ಕೆ ಪತ್ರಕರ್ತರಿಂದ ಮನವಿ



**ಯುವ ಮಾರ್ಗ ಸುದ್ದಿ**

**ಸಿರವಾರ,ಆ.26–**ವರದಿಗಾಗಿ ಹೋಗಿದ್ದ ಅರಕೇರಾ ಪತ್ರಕರ್ತರಿಗೆ ಕೊತ್ತದೊಡ್ಡಿ ಏಕಲವ್ಯ ವಸತಿ ಶಾಲೆಯ ಪ್ರಿನ್ಸಿಪಾಲ್‌ಸುರೇಶ ವರ್ಮಾ ಅವರು ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಘಟನೆಯನ್ನು ಸಿರವಾರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ತೀವ್ರವಾಗಿ ಖಂಡಿಸುತ್ತದೆ ಪ್ರಜಾಪ್ರಭುತ್ವದ ನಾಲ್ಕನೇ ಸ್ಥಂಬವೆಂದು ಕರೆಯಲ್ಪಡುವ ಮಾಧ್ಯಮದವರಿಗೆ ನಿಂದಿರುವುದು ಸರಿಯಲ್ಲ ಜನರ ಧ್ವನಿಯಾಗಿ ಪತ್ರಕರ್ತರು ಕಾರ್ಯನಿರ್ವಹಿಸುತ್ತಾರೆ ಇಂತವರಿಗೆ ತಮ್ಮ ಜವಾಬ್ದಾರಿ ಮರೆತು ಅವಾಚ್ಯವಾಗಿ ನಿಂದಿಸಿರುವ ಪ್ರಿನಸಿಪಾಲ್ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಮತ್ತು ಈ ಕೂಡಲೇ ಅವರನ್ನು ಸೇವೆಯಿಂದ ಅಮಾನತ್ತು ಮಾಡಬೇಕೆಂದು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಎಂ.ಗುಂಡಪ್ಪ ಆಗ್ರಹಿಸಿದರು.

ಅರಕೇರ ಪಟ್ಟಣದಲ್ಲಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕೊತ್ತದೊಡ್ಡಿ ಏಕಲವ್ಯ ವಸತಿ ಶಾಲೆಯ ಪ್ರಿನ್ಸಿಪಲ್ ಪತ್ರಕರ್ತರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಘಟನೆಯನ್ನು ಕರ್ನಾಟಕ ಸಂಘ, ಸಿರವಾರ ತಾಲ್ಲೂಕ ಘಟಕ ತೀವ್ರವಾಗಿ ಖಂಡಿಸಿ ಜಿಲ್ಲಾಧಿಕಾರಿಗೆ ಬರೆದ ಮನವಿ ಪತ್ರವನ್ನು ತಹಶಿಲ್ದಾರರಿಗೆ ನೀಡುವ ಮೂಲಕ ಒತ್ತಾಯಿಸಲಾಯಿತು.

ಕೊತ್ತದೊಡ್ಡಿ ವಸತಿ ಶಾಲೆಯಲ್ಲಿ ಅನಾರೋಗ್ಯಕ್ಕೆ ತುತ್ತಾದ ವಿದ್ಯಾರ್ಥಿಗಳು ಅರಕೇರ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ತಪಾಸಣೆ ಮಾಡಿಸಿಕೊಳ್ಳುವ ಸಂದರ್ಭದಲ್ಲಿ ಪತ್ರಕರ್ತರು ವಿಡಿಯೋ,ಫೋಟೊ ಚಿತ್ರಿಕರಿಸಿಕೊಂಡಿದ್ದರು. ಈ ವೇಳೆ ಜವಬ್ದಾರಿಯುತ ಸ್ಥಾನದಲ್ಲಿದ್ದ ಪ್ರಿನ್ಸಿಪಾಲ್ ಸುರೇಶ ವರ್ಮಾ ಅವರು ಮಾಹಿತಿ ಮತ್ತು ಚಿತ್ರ ಸಂಗ್ರಹ ಮಾಡಿಕೊಂಡು ಬರಲು ಹೋಗಿದ್ದ ಪತ್ರಕರ್ತರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಪ್ರಿನ್ಸಿಪಲ್ ಮೇಲೆ ಕ್ರಮಕ್ಕೆ ಪತ್ರಕರ್ತರು ಒತ್ತಾಯಿಸಿದರು.

ಮಾಧ್ಯಮದವರೊಂದಿಗೆ ಅನುಚಿತವಾಗಿ ವರ್ತಿಸಿರುವ ಪ್ರಿನ್ಸಿಪಾಲ್ ಮಾಧ್ಯಮದವರು ಲೋಫರ್ಸ್, ಉಪಯೋಗಕ್ಕೆ ಬಾರದವರು, ಇಡಿಯಟ್ ನೀವೇನು ಮಾಹಿತಿ ಪಡೆಯುತ್ತೀರಿ ಎಂದು ನಿಂದಿಸಿರುವುದು ಖಂಡನೀಯ ಪತ್ರಕರ್ತರೊಂದಿಗೆ ಅನುಚಿತವಾಗಿ ವರ್ತಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಜವಾಬ್ದಾರಿ ಮರೆತ ಕೊತ್ತದೊಡ್ಡಿ ಏಕಲವ್ಯ ವಸತಿ ಶಾಲೆಯ ಪ್ರಿನ್ಸಿಪಾಲನನ್ನು ಸೇವೆಯಿಂದ ಆಮಾನತುಗೊಳಿಸಬೇಕೆಂದು ಒತ್ತಾಯಿಸಲಾಯಿತು. ಸಂದರ್ಭದಲ್ಲಿ ಪತ್ರಕರ್ತರಾದ ಸುರೇಶ, ಹನುಮೇಶ ಭಲವಾದಿ, ರಂಗನಾಥ ನಾಯಕ, ಮಲ್ಲಪ್ಪ ಬಿ, ಮಹದ್ ಆಲಿ, ಮಹೇಶ ಪಾಟೀಲ್,ಎಂ.ಮುರುಗಪ್ಪ, ನಾಗರಾಜ ಕರಿಲಕರ್, ಮಹಾಂತೇಶ ಸ್ವಾಮಿ, ವಿಜಯಕುಮಾರ್, ಈರೇಶ ಗಣದಿನ್ನಿ, ಪಿ.ಗಣೇಶ ಸೇರಿದಂತೆ ಇನ್ನಿತರರು

# ಅರಕೇರಾ ಬಾಲಕರ ಖೋಖೋ ತಂಡ ತಾಲೂಕು ಮಟ್ಟಕ್ಕೆ ಆಯ್ಕೆ



**ಯುವ ಮಾರ್ಗ ಸುದ್ದಿ**

**ಅರಕೇರಾ,ಆ.26–**ಪಟ್ಟಣದ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪ್ರೌಢ ಶಾಲೆಗಳ ವಲಯ ಮಟ್ಟದ ಖೋ ಖೋ ಕ್ರೀಡೆಯಲ್ಲಿ ಪಟ್ಟಣದ ಶ್ರೀ ಸಿದ್ದಯ್ಯ ಹವಲ್ದಾರ್ ಸರ್ಕಾರಿ ಬಾಲಕರ ಪ್ರೌಢ ಶಾಲೆ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಗಳಿಸಿದ್ದಾರೆ.

ಅರಕೇರಾ, ಜಾಗೀರ ಜಾಡಲದಿನ್ನಿ, ಹೆಮನೂರು ಹಾಗೂ ಮುಷ್ಟೂರು ಪ್ರೌಢ ಶಾಲೆಗಳು ಭಾಗವಹಿಸಿದ್ದವು. ಎರಡು ಸೆಮಿಫೈನಲ್ ನಲ್ಲಿ ಅರಕೇರಾ ಬಾಲಕರ ಪ್ರೌಢಶಾಲೆ ಮತ್ತು ಜಾಗೀರ ಜಾಡಲದಿನ್ನಿ ಎರಡು ತಂಡಗಳು ಫೈನಲ್ ಪ್ರವೇಶಿಸಿದ್ದವು. ರೋಚಕ ಹಣಾಹಣಿಯಲ್ಲಿ 4 ಅಂಕಗಳ ಅಂತರದಿಂದ ಪಟ್ಟಣದ ಬಾಲಕರ ಪ್ರೌಢ ಶಾಲೆ ತಂಡ ಗೆಲುವನ್ನು ಸಾಧಿಸಿತು. ವಲಯ ಮಟ್ಟದಿಂದ ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಮುಖ್ಯ ಶಿಕ್ಷಕ ಹುಸೇನ್ ಭಾಷಾ ತಿಳಿಸಿದರು. ವಿಜೇತ ತಂಡಗಳಿಗೆ ಜಾಗೀರ ಜಾಡಲದಿನ್ನಿ ಪ್ರೌಢ ಶಾಲೆ ಮುಖ್ಯ ಶಿಕ್ಷಕಿ ಶೋಭಾ ಪ್ರಮಾಣ ಪತ್ರ ವಿತರಿಸಿದರು.

ಅತಿಥಿ ಶಿಕ್ಷಕರಾದ ಬಸವಲಿಂಗಯ್ಯ ಸ್ವಾಮಿ ಹಿರೇಮಠ, ಇಮ್ರಾನ್ ಅಜಿತ್ ಕುಮಾರ್ ಶಾಖೆ, ಸಾಬಯ್ಯ, ದೇವದತ್ತ ಇತರರಿದ್ದರು.

## ಗಂಡು ಮಗುವಿನ ಜೈವಿಕ ಪಾಲಕರ ಪತ್ತೆಗೆ ಮನವಿ

**ರಾಯಚೂರು,ಆ.26–**ತಾಲೂಕಿನ ಕಲ್ಮಲಾ ಗ್ರಾಮದ ಕಾಲುವೆ ಪಕ್ಕದಲ್ಲಿ ಆಗಸ್ಟ್ 19ರಂದು ಆಗ ತಾನೇ ಜನಿಸಿದ ಗಂಡು ಮಗುವನ್ನು ಯಾರೋ ಬಿಟ್ಟು ಹೋಗಿದ್ದು, ಜೈವಿಕ ಪಾಲಕರು ಪತ್ತೆಗೆ ಕೋರಲಾಗಿದೆ.

ಸಾರ್ವಜನಿಕರು ಮಗು ಅಳುವುದನ್ನು ಗಮನಿಸಿ ಮಗುವನ್ನು ರಕ್ಷಿಸಿ ಕಲ್ಮಲಾ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಮಕ್ಕಳ ಸಹಾಯವಾಣಿ ಘಟಕಕ್ಕೆ ಕರೆ ಮಾಡಿ ತಿಳಿಸಿರುತ್ತಾರೆ. ನಂತರ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮತ್ತು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರ ನಿರ್ದೇಶದಂತೆ ಶಿಶು ಅಭಿವೃದ್ಧಿ ಯೋಜನೆ ಗಿಲ್ಲೆಸೂಗೂರು ಸಿಬ್ಬಂದಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಕ್ಕಳ ಸಹಾಯವಾಣಿ ಘಟಕ ಸಿಬ್ಬಂದಿಗಳ ಸಹಕಾರದಲ್ಲಿ ಈ ಮಗುವನ್ನು ಪೋಷಣೆ ಮತ್ತು ರಕ್ಷಣೆಗಾಗಿ ರಿಮ್ಸ್ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ.

ಈ ಮಗುವಿನ ಜೈವಿಕ ಪಾಲಕರು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಾರ್ಯಲಯ ಮನೆ ಸಂಖ್ಯೆ 1–9–138, ಆಜಾದ ನಗರ, ಪಶ್ಚಿಮ ಪೋಲಿಸ್ ಠಾಣೆ ಹಿಂದುಗಡೆ, ಮಾರಮ್ಮ ಗುಡಿ ಹತ್ತಿರ, ರಾಯಚೂರು ಇಲ್ಲಿಗೆ ಸಂಪರ್ಕಿಸಬಹುದಾಗಿದೆ. ಜೈವಿಕ ಪಾಲಕರು ಪತ್ತೆಯಾಗದಿದ್ದಲ್ಲಿ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವತಿಯಿಂದ ಕಾನೂನಿನಾತ್ಮಕವಾಗಿ ದತ್ತು ಪ್ರಕ್ರಿಯೆಗೆ ಒಳಪಡಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಕಚೇರಿಯ ದೂರವಾಣಿ ಸಂಖ್ಯೆ: 08532–2262266, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮೊಬೈಲ್ ಸಂಖ್ಯೆ: 7829981827, ರಕ್ಷಣಾಧಿಕಾರಿ (ಅಸಾಂಸ್ಥಿಕ) ಮೊಬೈಲ್ ಸಂಖ್ಯೆ: 8660627793ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಕ್ಷೇಪಣೆಗೆ ಅರ್ಜಿ ಆಹ್ವಾನ

**ರಾಯಚೂರು,ಆ.26–** ತಾಲೂಕಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವ್ಯಾಪ್ತಿಯಲ್ಲಿ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಖಾಲಿ ಹುದ್ದೆಗಳಿಗೆ ಜಿಲ್ಲಾ ಆಯ್ಕೆ ಸಮಿತಿಯಿಂದ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದ್ದು, ಅಕ್ಷೇಪಣೆಗೆ ಅರ್ಜಿ ಆಹ್ವಾನಿಸಲಾಗಿದೆ.

ರಾಳದೊಡ್ಡಿಯ ಅಂಗನವಾಡಿ ಕೇಂದ್ರ 02ರಲ್ಲಿ ಕಾರ್ಯಕರ್ತೆ ಹುದ್ದೆಗೆ ಕು.ಶ್ರಾವಣಿ ತಂದೆ ಲಕ್ಷ್ಮಣ್, ಯರಗುಂಟಾ ಅಂಗನವಾಡಿ 02ರಲ್ಲಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಕು.ತಾಹೇರ ತಂದೆ ಅಬ್ದುಲ್ ನಜೀರ್, ರಾಮನಗರ ಅಂಗನವಾಡಿ ಕೇಂದ್ರ 02ರಲ್ಲಿ ಅಂಗನವಾಡಿ ಸಹಾಯಕಿ ಹುದ್ದೆಗೆ ಕವಿತಾ ಗಂಡ ವಿಶಾಲ್, ಜನತಾ ಕಾಲೋನಿ ಅಂಗನವಾಡಿ ಕೇಂದ್ರ 01ರಲ್ಲಿ ಅಂಗನವಾಡಿ ಸಹಾಯಕಿ ಹುದ್ದೆಗೆ ಗಂಗಮ್ಮ ಗಂಡ ಶ್ರೀ ಜಸ್ಟೀನ್, ಕಲವಲದೊಡ್ಡಿ ಅಂಗನವಾಡಿ 02ರಲ್ಲಿ ಅಂಗನವಾಡಿ ಸಹಾಯಕಿ ಹುದ್ದೆಗೆ ಮಹಾದೇವಿ ಗಂಡ ಶ್ರೀ ನಾಗರಾಜ್, ಯರಗುಂಟಾ ಅಂಗನವಾಡಿ ಕೇಂದ್ರ 02ರಲ್ಲಿ ಅಂಗನವಾಡಿ ಸಹಾಯಕಿ ಕು॥ಪಾರ್ವತಿ ತಂದೆ ಯಲ್ಲಪ್ಪ ಇವರನ್ನು ತಾತ್ಕಾಲಿಕವಾಗಿ ಮಾಡಲಾಗಿದ್ದು, ಈ ತಾತ್ಕಾಲಿಕ ಆಯ್ಕೆಪಟ್ಟಿಗೆ ಅಕ್ಷೇಪಣೆ ಅರ್ಜಿ ಸಲ್ಲಿಸುವವರು ಸೂಕ್ತ ದಾಖಲಾತಿಗಳೊಂದಿಗೆ ಸೆಪ್ಟೆಂಬರ್ 4ರ ಸಂಜೆ 5.30ರೊಳಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ರಾಯಚೂರು ಅವರಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಆಕ್ಷೇಪಣೆ ಸಲ್ಲಿಸುವವರು ಆಕ್ಷೇಪಣೆ ಅರ್ಜಿಯ ಜೊತೆಗೆ ಯಾವುದೇ ದಾಖಲಾತಿಗಳು ಸಲ್ಲಿಸದಿದ್ದಲ್ಲಿ ಅಂತಹವರ ಆಕ್ಷೇಪಣೆ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ರಾಯಚೂರು ಅವರನ್ನು ಸಂಪರ್ಕಿಸುವಂತೆ ರಾಯಚೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಿರವಾರ: ಆಕ್ಷೇಪಣೆಗೆ ಅರ್ಜಿ ಆಹ್ವಾನ

**ರಾಯಚೂರು,ಆ.26–** ಜಿಲ್ಲೆಯ ಸಿರವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವ್ಯಾಪ್ತಿಯಲ್ಲಿ ಅಂಗನವಾಡಿ ಸಹಾಯಕಿಯರ ಖಾಲಿ ಹುದ್ದೆಗಳಿಗೆ ಜಿಲ್ಲಾ ಆಯ್ಕೆ ಸಮಿತಿಯಿಂದ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದ್ದು, ಆಕ್ಷೇಪಣೆಗೆ ಅರ್ಜಿ ಆಹ್ವಾನಿಸಲಾಗಿದೆ.

ಸಿರವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವ್ಯಾಪ್ತಿಯ ಬಾಗಲವಾಡ ಅಂಗನವಾಡಿ ಕೇಂದ್ರ 8ರಲ್ಲಿ ಸಹಾಯಕಿರ 1 ಹುದ್ದೆಗೆ ಶಿವಲೀಲಾ ತಂದೆ ಮಹಾಂತೇಶ್ ಅವರನ್ನು ತಾತ್ಕಾಲಿಕವಾಗಿ ಮಾಡಲಾಗಿದ್ದು, ಈ ತಾತ್ಕಾಲಿಕ ಆಯ್ಕೆಪಟ್ಟಿಗೆ ಅಕ್ಷೇಪಣೆ ಅರ್ಜಿ ಸಲ್ಲಿಸುವವರು ಸೂಕ್ತ ದಾಖಲಾತಿಗಳೊಂದಿಗೆ ಸೆಪ್ಟೆಂಬರ್ 1ರ ಸಂಜೆ 5.30ರೊಳಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಸಿರವಾರ ಅವರಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಆಕ್ಷೇಪಣೆ ಸಲ್ಲಿಸುವವರು ಆಕ್ಷೇಪಣೆ ಅರ್ಜಿಯ ಜೊತೆಗೆ ಯಾವುದೇ ದಾಖಲಾತಿಗಳು ಸಲ್ಲಿಸದಿದ್ದಲ್ಲಿ ಅಂತಹವರ ಅಕ್ಷೇಪಣೆ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಸಿರವಾರ ಅವರನ್ನು ಸಂಪರ್ಕಿಸುವಂತೆ ಸಿರವಾರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H